# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA








ಸಂಪುಟ:01 • ಸಂಚಿಕೆ:194 • ನೋಂದಣಿ ಸಂ.:KARKAN27911 • ವಿಜಯನಗರ • 27.12.2023 • ಬುಧವಾರ • ಪುಟ:04 • ಬೆಲೆ:2
Volume:01 • Issue:194 • Reg.No:KARKAN27911 • VIJAYANAGARA • 27.12.2023 • Wednesday • Page:04 • Rs:2


# ಇನ್ಮುಂದೆ ಇ-ಫೈಲಿಂಗ್ ಕಡ್ಡಾಯ ಭೌತಿಕ ಕಡತ ಸ್ವೀಕಾರಕ್ಕೆ ಬ್ರೇಕ್

**ಕಂದಾಯ ಸಚಿವ ಕೃಷ್ಣ ಬೈರೇಗೌಡ ಖಡಕ್ ಸೂಚನೆ । ಹೊಸಪೇಟೆಯಲ್ಲಿ ಪ್ರಗತಿ ಪರಿಶೀಲನಾ ಸಭೆ**

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರದಲ್ಲಿ ಇ-ಆಫೀಸ್ ಬಳಕೆ ಹೆಚ್ಚುತ್ತಿರುವುದು ಉತ್ತಮ ಬೆಳವಣಿಗೆ. ಆದರೆ, ಸರಾಸರಿಯಾಗಿ ಜಿಲ್ಲಾ ಭವನದಲ್ಲಿ ಮಾತ್ರ ಇ-ಆಫೀಸ್ ಬಳಕೆ ಹೆಚ್ಚಾಗಿದೆ. ತಹಶೀಲ್ದಾರ್ ಹಾಗೂ ಎ.ಸಿ ಮಟ್ಟದಲ್ಲಿ ಈಗಲೂ ಇ-ಆಫೀಸ್ ಬಳಕೆ ಗಣನೀಯವಾಗಿ ಏರಿಕೆಯಾಗಿಲ್ಲ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಸಮಧಾನ ಹೊರಹಾಕಿದರು.

ವಿಜಯನಗರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಂಗಳವಾರ ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ನಡೆಸಿದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ತಹಶೀಲ್ದಾರ್ ಮತ್ತು ಉಪ ವಿಭಾಗಾಧಿಕಾರಿ ಕಚೇರಿಗೆ ದಿನಕ್ಕೆ ಸರಾಸರಿಯಾಗಿ 30 ರಿಂದ 40 ಮಾತ್ರ ಹೊಸ ಕಡತ-ಟಪಾಲುಗಳು ಬರುತ್ತವೆ. ಇವನ್ನು ಇ-ಆಫೀಸ್ ಮೂಲಕ ವಿಲೇವಾರಿ ಮಾಡಲು ಏನು ಸಮಸ್ಯೆ? ಎಂದು ಪ್ರಶ್ನಿಸಿದ ಸಚಿವರು, ಇನ್ಮುಂದೆ ಭೌತಿಕ ಕಡತಗಳನ್ನು ಸ್ವೀಕರಿಸುವಂತಿಲ್ಲ.

ಜನರಿಂದ ಟಪಾಲು ಸ್ವೀಕರಿಸುತ್ತಿದ್ದಂತೆ ಇ-ಆಫೀಸ್ ಫೈಲ್ ಸೃಷ್ಟಿಸಬೇಕು. ಜನರಿಗೆ ಶೀಘ್ರ ಮತ್ತು ಸುಲಭ ಆಡಳಿತ ನೀಡುವ ಮತ್ತು ಭ್ರಷ್ಟಾಚಾರಕ್ಕೆ ತಡೆಯೊಡ್ಡುವ ಸಲುವಾಗಿಯೇ ಇ-ಆಫೀಸ್ ಜಾರಿಗೊಳಿಸಲಾಗಿದೆ. ಪ್ರತಿಯೊಬ್ಬ ಅಧಿಕಾರಿಯೂ ಇದನ್ನು ಚಾಚೂ ತಪ್ಪದೇ ಪಾಲಿಸಬೇಕು ಎಂದು ತಾಕೀತು ಮಾಡಿದರು.

ಫ್ರೂಟ್ಸ್ ತಂತ್ರಾಂಶದಲ್ಲಿ ರೈತರ ಸಂಪೂರ್ಣ ಮಾಹಿತಿಯನ್ನು ಡಿ.31ರ ಒಳಗಾಗಿ ಅಪ್‌ಡೇಟ್ ಮಾಡಲು ಮತ್ತು ಬೆಳೆ ನಷ್ಟ ಪರಿಹಾರದ ಮೊದಲ ಕಂತನ್ನು ಹೊಸ ವರ್ಷದ ಮೊದಲ ವಾರದಲ್ಲಿ ರೈತರ ಖಾತೆ ಫ್ರೂಟ್ಸ್ ಮೂಲಕ ಪಾವತಿಸಲಾಗುತ್ತದೆ ಜಿಲ್ಲೆಯಲ್ಲಿ ಈವರೆಗೆ ಶೇ.77 ರಷ್ಟು ಫ್ರೂಟ್ಸ್ ಅಪ್‌ಡೇಟ್ ಮಾಡಲಾಗಿದೆ. ಇದರಿಂದ ಬರ ಪರಿಹಾರದ ಹಣ ರೈತರಿಗೆ ಆನ್‌ಲೈನ್ ಮೂಲಕವೇ ತಲುಪಲಿದೆ. ಫ್ರೂಟ್ಸ್ ತಂತ್ರಾಂಶದಲ್ಲಿ ರೈತರ ಸಂಪೂರ್ಣ ಜಮೀನಿನ ಒಟ್ಟು ವಿಸ್ತೀರ್ಣ ನಮೂದಿಸಿದರೆ



ಮಾತ್ರ ಅವರಿಗೆ ನ್ಯಾಯಯುತ ಪರಿಹಾರ ತಲುಪಲು ಸಾಧ್ಯವಾಗಲಿದೆ.

ರೈತರಿಗೆ ಮೊದಲ ಕಂತಿನ ಹಣ ನೀಡಲು ಸರ್ಕಾರದ ಬಳಿ ಹಣ ಇದೆ. ಆದರೂ ಫ್ರೂಟ್ಸ್ ತಂತ್ರಾಂಶದ ನವೀಕರಣಗೊಳ್ಳದೆ ರೈತರಿಗೆ ಹಣ ಬಿಡುಗಡೆ ಸಾಧ್ಯವಿಲ್ಲ ಎಂದು ಗಡುವು ನೀಡಿದ ಅವರು, ಗ್ರಾಮ ಆಡಳಿತ ಅಧಿಕಾರಿಗೆ ಆತನ ಅಧಿಕಾರದ ವ್ಯಾಪ್ತಿಯಲ್ಲಿ ಯಾವ ರೈತನಿಗೆ ಎಲ್ಲಿ, ಎಷ್ಟು ಎಕರೆ ಜಮೀನಿದೆ? ಎಂಬ ಕನಿಷ್ಠ ಮಾಹಿತಿ ಇದ್ದೇ ಇರುತ್ತದೆ. ಅದನ್ನು ಮತ್ತೆ ರೈತನಲ್ಲಿ ಕೇಳಿ ತಂತ್ರಾಂಶದಲ್ಲಿ ನಮೂದಿಸಲು ಸೂಚಿಸಿದರು.

ಪಹಣಿ ಜೊತೆಗೆ ಆಧಾರ್ ಲಿಂಕ್ ಮಾಡಲು ಕರೆ: ರಾಜ್ಯದಲ್ಲಿ ಶೇ.70 ರಷ್ಟು ಸಣ್ಣ ರೈತರಿದ್ದಾರೆ. ಆದರೆ, ಕೇಂದ್ರ ಸರ್ಕಾರದ ಹಳೆಯ ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿನ ಸಣ್ಣ ರೈತರ ಸಂಖ್ಯೆ ಶೇ.44 ಮಾತ್ರ. ಇದರಿಂದ ರಾಜ್ಯಕ್ಕೆ ಲಭ್ಯವಾಗುವ ಬರ ಪರಿಹಾರದಲ್ಲೂ ಅನ್ಯಾಯವಾಗುತ್ತಿದೆ. ಹೀಗಾಗಿ ಗ್ರಾಮ ಲೆಕ್ಕಿಗರು ಮುಂದಿನ ದಿನಗಳಲ್ಲಿ ರೈತರ ಪಹಣಿಗಳನ್ನು ಆಧಾರ್ ನಂಬರ್ ಜೊತೆಗೆ ಲಿಂಕ್ ಮಾಡಿದರೆ ರಾಜ್ಯದ ಸಣ್ಣ ರೈತರ ಅಂಕಿಸಂಖ್ಯೆ ನಿಖರವಾಗಿ ತಿಳಿಯಲಿದೆ. ಇದನ್ನೇ ಕೇಂದ್ರದ ಮುಂದಿಟ್ಟು ರಾಜ್ಯದ ಹಕ್ಕನ್ನು ಮಂಡಿಸಬಹುದು. ಇದಕ್ಕೆ ಸಹಕಾರಿಯಾಗುವಂತೆ ಶೀಘ್ರದಲ್ಲೇ ಆ್ಯಪ್ ಒಂದನ್ನೂ ಅಭಿವೃದ್ಧಿ ಪಡಿಸಲಾಗುವುದು ಎಂದು ಸಚಿವರು ಸೂಚಿಸಿದರು. >>3

# ಜಿಲ್ಲೆಯ ಅಭಿವೃದ್ಧಿಗಾಗಿ ಅಧಿಕಾರಿಗಳು ಶ್ರಮಿಸಿ

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಕೆ.ವಿ.ತ್ರಿಲೋಕ ಚಂದ್ರ ಸೂಚನೆ । ಪ್ರಗತಿ ಪರಿಶೀಲನಾ ಸಭೆ**

■ **ಹಂಪಿ ಟೈಮ್ಸ್ ಬಳ್ಳಾರಿ**

ರಾಜ್ಯ ಸರ್ಕಾರದ ಜನಪರ ಯೋಜನೆಗಳನ್ನು ಸಾರ್ವಜನಿಕರಿಗೆ ತಲುಪಿಸುವುದು ಹಾಗೂ ಅಭಿವೃದ್ಧಿ ಕಾರ್ಯಗಳನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸುವ ಮೂಲಕ ಜಿಲ್ಲೆಯ ಅಭಿವೃದ್ಧಿಗಾಗಿ ಅಧಿಕಾರಿಗಳು ಶ್ರಮಿಸಬೇಕು. ಗಡಿನಾಡು ಬಳ್ಳಾರಿ ಜಿಲ್ಲೆಯಲ್ಲಿ ಹಲವಾರು ರೀತಿಯ ಅನುದಾನಗಳು ಲಭ್ಯವಿದ್ದು, ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಮುಖ್ಯಮಂತ್ರಿಗಳ ಕಾರ್ಯದರ್ಶಿ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಡಾ.ಕೆ.ವಿ.ತ್ರಿಲೋಕ ಚಂದ್ರ ಅವರು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇಂದು ನಗರದ ಜಿಲ್ಲಾ ಪಂಚಾಯತ್‌ನ ನಜೀರ್‌ಸಾಬ್ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದ ಅವರು ಜಿಲ್ಲೆಯ ಸಮಸ್ಯೆಗಳಿಗೆ ಸ್ಪಂದಿಸುವುದು ಹಾಗೂ ಭವಿಷ್ಯದಲ್ಲಿ ಬರಬಹುದಾದ ಸಮಸ್ಯೆಗಳ ಕುರಿತು ಈಗಲೇ ಸಿದ್ಧತೆ ನಡೆಸಬೇಕು ಎಂದು ಹೇಳಿದರು.

ಬಳ್ಳಾರಿಯಂತಹ ಬಿಸಿಲ ನಾಡಿನಲ್ಲಿ ಮುಖ್ಯವಾಗಿ



ಮುಂದಿನ ಒಂದೆರೆಡು ತಿಂಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ ಜಾನುವಾರುಗಳಿಗೆ ಮೇವಿನಂತಹ ಸಮಸ್ಯೆಗಳು ಖಂಡಿತವಾಗಿ ಬರುತ್ತವೆ, ಇಂತಹ ಸಮಸ್ಯೆಗಳಾದಾಗ ಸರ್ಕಾರ ಸಾರ್ವಜನಿಕರಿಗೆ ಸಕರಾತ್ಮಕವಾಗಿ ಸ್ಪಂದಿಸುವ ಮೂಲಕ ಕುಡಿಯುವ ನೀರಿನ ಸಮಸ್ಯೆ ಮತ್ತು ಜಾನುವಾರುಗಳ ಮೇವಿನ ಸಮಸ್ಯೆ ಪರಿಹರಿಸಲು ಸನ್ನದ್ಧರಾಗಿರಬೇಕು ಎಂದರು. ನಂತರ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ ಸಾಧನೆಗಳ ಕುರಿತು ಪರಾಮರ್ಶಿಸಿದ ಅವರು ಕಳೆದ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮಾಡಿರುವ ಸಾಧನೆಗಿಂತ ಈ ವರ್ಷದ ಸಾಧನೆ ಅದಕ್ಕಿಂತ ಉತ್ತಮವಾಗಿರಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗ್ರಾಮೀಣಾ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿ ಗುಪ್ತಾ ಅವರು, ಮುಂಬರುವ ಬೇಸಿಗೆಯಲ್ಲಿ ಜಿಲ್ಲೆಯಲ್ಲಿ ಒಟ್ಟು 114 ಹಳ್ಳಿಗಳನ್ನು ಕುಡಿಯುವ ನೀರಿಗೆ ತಲೆದೋರಬಹುದಾದಂತಹ ಸಮಸ್ಯಾತ್ಮಕ ಗ್ರಾಮಗಳೆಂದು ಗುರುತಿಸಲಾಗಿದ್ದು, ಖಾಸಗಿ ಬೋರ್‌ವೆಲ್ ಮತ್ತು ಕುಡಿಯುವ ನೀರಿನ ಟ್ಯಾಂಕರ್ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಮಾರ್ಚ್ ತಿಂಗಳಿನಿಂದ ಆರಂಭವಾಗುವ ಬೇಸಿಗೆಯನ್ನು ನಿಭಾಯಿಸಲು ಅಗತ್ಯ ಕ್ರಮ ವಹಿಸಲಾಗುವುದು ಎಂದು ಸಭೆಗೆ ವಿವರಿಸಿದರು.

ಸಿರುಗುಪ್ಪ-ಬಳ್ಳಾರಿ, ಬಳ್ಳಾರಿ-ಸಂಡೂರು ಭಾಗಗಳಿಗೆ ತೆರಳುವ ರಸ್ತೆಗಳಲ್ಲಿ ತಗ್ಗು ಗುಂಡಿಗಳನ್ನು ಮುಚ್ಚಲು ಕ್ರಮವಹಿಸಬೇಕು. ಶೇ.60ರಷ್ಟು ಬಾಧಿತವಾದ ರಸ್ತೆಗಳಿಗೆ ಆದ್ಯತೆ ನೀಡಿ, ಕಾಮಗಾರಿ ಕೈಗೊಳ್ಳಬೇಕು ಎಂದು ಲೋಕೋಪಯೋಗಿ ಇಲಾಖೆ ಮತ್ತು ರಾಜ್ಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲೆಯಲ್ಲಿ ಶಾಲಾ ಶಿಕ್ಷಣ ಹಂತದಲ್ಲಿ ಮಕ್ಕಳ ಕಲಿಕೆಯು ಕುಂಠಿತಗೊಂಡಿದೆ. ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಶಿಕ್ಷಕರು >>2

# ಬಂಧುಗಳು ಇರುವತನಕ, ಸ್ನೇಹಿತರು ಕಡೆತನಕ

**ನಿವೃತ್ತ ವೈದ್ಯೆ, ಸಾಹಿತಿ ಡಾ.ಎಸ್.ಡಿ. ಸುಲೋಚನ ಅಭಿಮತ । ಎನ್‌ಎಸ್‌ಎಸ್ ವಾರ್ಷಿಕ ಶಿಬಿರ**

■ **ಹಂಪಿ ಟೈಮ್ಸ್ ಹೊಸಪೇಟೆ**

ಬಂಧುಗಳು ಸಂಪತ್ತು ಇರುವುತನಕ, ಸ್ನೇಹಿತರು ಕಡೆತನಕ ಎಂಬಂತೆ ಪರಸ್ಪರ ಕಷ್ಟಸುಖ ಹಂಚಿಕೊಳ್ಳಲು ಗೆಳೆತನ ಬಹು ಮುಖ್ಯ. ಕಷ್ಟ ಕಾಲದಲ್ಲಿ ನೆರವಿಗೆ ಬರುವವರು ಸ್ನೇಹಿತರೇ ವಿನಃ ಬಂಧುಗಳಲ್ಲ ಎಂದು ನಿವೃತ್ತ ವೈದ್ಯರು ಹಾಗೂ ಸಾಹಿತಿಗಳಾದ ಡಾ.ಎಸ್.ಡಿ. ಸುಲೋಚನ ಅಭಿಪ್ರಾಯಪಟ್ಟರು.

ನಗರದ ನೌಕರರ ಭವನದಲ್ಲಿ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜು ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವಾರ್ಷಿಕ ವಿಶೇಷ ಶಿಬಿರದ ನಾಲ್ಕನೇ ದಿನದ ಕವಿಗೊಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಬಂಧುಗಳು ಇದ್ದಾಗ ಮಾತ್ರ ಜಾತ್ರೆ ಮಾಡಲು ಬರುತ್ತಾರೆ. ಜೀವನವೆಂಬ ಯಾತ್ರೆಯಲ್ಲಿ ನಿಜವಾಗಿ ಭಾಗಿದಾರರು ಸ್ನೇಹಿತರು. ಜ್ಞಾನದ ಕ್ಷಿತಿಜ ವಿಸ್ತರಿಸಿಕೊಳ್ಳಿ. ಸಂಕೋಚ ಸ್ವಭಾವ ತೊರೆಯಬೇಕು. ಅಪ್ಪ ಅಮ್ಮನವರಿಗೆ ಹೇಳದ ವಿಷಯ ಸ್ನೇಹಿತರಲ್ಲಿ ಹೇಳಿಕೊಳ್ಳುತ್ತೇವೆ. ಸ್ನೇಹತ್ವ ಬಹು ಮುಖ್ಯ ಎಂದರು.

ಡಾ.ದಯಾನಂದ ಕಿನ್ನಾಳ್ ಕವಿಗೋಷ್ಠಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾಹಿತ್ಯ ಜೀವನದ ಅವಿಭಾಜ್ಯ ಅಂಗ. ಸಾಹಿತ್ಯದ ಒಡನಾಟ ಮಾಡಿದವರು ಸಂತೋಷದಿಂದ ಇರಲು ಸಾಧ್ಯ. ಕವಿಗೋಷ್ಠಿಯ ಉದ್ದೇಶ ಚರಿತ್ರೆಯನ್ನು ಉಳಿಸಿ ಬೆಳೆಸುವುದಾಗಿದೆ. ಇತಿಹಾಸ ಉಳಿಸಿ ಬೆಳೆಸುವ ಜವಾಬ್ದಾರಿ ಯುವಕರ ಮೇಲಿದೆ. ವಿದ್ಯಾರ್ಥಿಗಳು ಕವಿಗಳಿಗೆ ಕಿವಿಯಾಗಬೇಕು. ಆಲಿಸುವ ಹವ್ಯಾಸ ರೂಢಿಸಿಕೊಳಬೇಕು. ನಂತರ ಬರವಣಿಗೆಗೆ ಇಳಿಯಬೇಕು. ಹುಟ್ಟುತ್ತಲೇ ಯಾರೂ ಎಲ್ಲಬಲ್ಲ ಬ್ರಹ್ಮರಲ್ಲ. ಹಾಡುತ್ತ ರಾಗ ಉಗುಳುತ್ತ ರೋಗ. ರಾಗಿಗಳಾಗಬೇಕೇ ವಿನಃ ರೋಗಿಗಳಾಗಬಾರದು ಎಂದರು.

**ಕವಿಗೋಷ್ಠಿ:** ವಿಶ್ವನಾಥ ಕವಿತಾಳ (ಪ್ರತಿಭೆ ), ಸೋ.ದಾ. ವಿರುಪಾಕ್ಷಗೌಡ (ಏಸುಕ್ರಿಸ್ತ), ವಿಶಾಲ್ ಮ್ಯಾಸರ್ (ಆಕೆ ಅವ್ವ), ಕವಿತಾ ನಾಯ್ಡು (ಮೌನ), ಯರಿಸ್ವಾಮಿ (ಬಾವುಗ), ಹೆಚ್. ಎಂ. ಜಂಬುನಾಥ (ಮಿಗಿಲಾವುದು), ಉಮಾಮಹೇಶ್ವರ (ಶ್ರೀಗಂಧದಂತೆ), ಪಿ.ಆರ್.ವೆಂಕಟೇಶ, ಗೀತಾ ಸುರೇಶ, ವಿದ್ಯಾರ್ಥಿ ಕವಿಗಳಾದ ಕಾವ್ಯ, ಸಾವಿತ್ರಿ, ಕೀರ್ತನಾ ಕವನಗಳನ್ನು ವಾಚಿಸಿದರು ಹಾಗೂ ಉಪನ್ಯಾಸಕರಾದ ಜಿ.ಹನುಮಂತಪ್ಪ, ರಾಮಾಲೆಪ್ಪ ಉಪಸ್ಥಿತರಿದ್ದರು. ಶಿಬಿರಾಧಿಕಾರಿ ಕೆ. ವಿಜಯಭಾಸ್ಕರ್, ಅಂಬಿಕಾ, ದಾಕ್ಷಾಯಣಿ ನಿರ್ವಹಿಸಿದರು.

# ಹಂಪಿ ಉತ್ಸವ ಫೆ.2, 3 ಮತ್ತು 4

**ಸಚಿವ ಜಮೀರ್ ಅಹಮದ್ ಖಾನ್ ಹೇಳಿಕೆ**

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಶ್ವ ವಿಖ್ಯಾತ ಹಂಪಿ ಉತ್ಸವ ಫೆಬ್ರವರಿ 2 ರಿಂದ ಮೂರು ದಿನಗಳ ಕಾಲ ನಡೆಸಲು ತೀರ್ಮಾನಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆಬ್ರವರಿ 2 ರಿಂದ ಮೂರು ದಿನಗಳ ಕಾಲ ಹಂಪಿ ಉತ್ಸವ ನಡೆಸಲು ಒಪ್ಪಿಗೆ ನೀಡಿದ್ದು, ಮೊದಲ ದಿನ ಉತ್ಸವ ಉದ್ಘಾಟನೆ ಮಾಡಲಿದ್ದಾರೆ. ಈ ಸಂಬಂಧ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾ ಧಿಕಾರಿ ದಿವಾಕರ್ ಅವರಿಗೆ ವಿಜಯ ನಗರ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಸೂಚನೆ ನೀಡಿದ್ದಾರೆ. ಈ ಬಾರಿಯ ಹಂಪಿ ಉತ್ಸವ ವಿಜೃಂಭಣೆಯಿಂದ ಮಾಡುವಂತೆ ಹಾಗೂ ಸ್ಥಳೀಯ ಕಲಾವಿದರು ಹಾಗೂ ಸಾಂಸ್ಕೃತಿಕ ಕಲೆ ಗಳಿಗೆ ಒತ್ತು ನೀಡಲು ಉಸ್ತುವಾರಿ ಸಚಿವರು ನಿರ್ದೇಶನ ನೀಡಿದ್ದಾರೆ. ಜಿಲ್ಲೆಯ ಎಲ್ಲ ಜನಪ್ರತಿನಿಧಿ ಗಳು, ಸಂಘಟನೆಗಳು ಹಾಗೂ ಸಾಂಸ್ಕೃತಿಕ ವಲಯದವರನ್ನು ಜತೆಗೂಡಿಸಿಕೊಂಡು ಉತ್ಸವ ಯಶಸ್ವಿಗೊಳಿಸಲು ತಿಳಿಸಿದ್ದಾರೆ. ಹಂಪಿ ಉತ್ಸವ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲೆಯ ಶಾಸಕರು ಸೇರಿ ಜನಪ್ರತಿನಿಧಿಗಳನ್ನು ಒಳಗೊಂಡಂತೆ ಸದ್ಯದಲ್ಲೇ ಸಭೆ ಸಹ ನಡೆಸಲಿದ್ದಾರೆ.

# ಮಕ್ಕಳ ಸಂರಕ್ಷಣೆ ನಮ್ಮೆಲ್ಲರ ಹೊಣೆ

**ತಹಶೀಲ್ದಾರ ವಿಶ್ವಜಿತ್ ಮೆಹ್ತಾ ಹೇಳಿಕೆ**



■ **ಹಂಪಿ ಟೈಮ್ಸ್ ಹೊಸಪೇಟೆ**

ಮಕ್ಕಳ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ ಎಂದು ತಾಲೂಕು ಬಾಲ್ಯ ವಿವಾಹ ನಿಷೇಧ ಸಮನ್ವಯ ಸಮಿತಿ ಅಧ್ಯಕ್ಷರಾದ ತಹಶೀಲ್ದಾರ ಆರ್.ವಿಶ್ವಜಿತ್ ಮೆಹ್ತಾ ಅವರು ಹೇಳಿದರು.

ಹೊಸಪೇಟೆ ನಗರದ ತಹಶೀಲ್ದಾರರ ಕಚೇರಿಯಲ್ಲಿ ಶುಕ್ರವಾರ ನಡೆದ ತಾಲ್ಲೂಕು ಮಟ್ಟದ ಬಾಲ್ಯ ವಿವಾಹ ನಿಷೇಧ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಶಾಲೆಗಳಲ್ಲಿ, ಗ್ರಾಮ ಪಂಚಾಯಿತಿ ಮಟ್ಟಗಳಲ್ಲಿ ನಡೆಯುವ ಗ್ರಾಮ ಸಭೆಗಳಲ್ಲಿ ಹಾಗೂ ಆರೋಗ್ಯ ಇಲಾಖೆಯಿಂದ, ಮಕ್ಕಳ ರಕ್ಷಣಾ ಘಟಕದಿಂದ ಬಾಲ್ಯ ವಿವಾಹ ನಿಷೇಧ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಬಾಲ್ಯ ವಿವಾಹ ಪ್ರಕರಣಗಳು ಕಂಡುಬಂದಲ್ಲಿ ಎಫ್.ಐ.ಆರ್ ದಾಖಲಿಸಲು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು. ಪ್ರಾಯಪೂರ್ವ ಬಾಲಕಿಯರ ಗರ್ಭಿಣಿ ಪ್ರಕರಣಗಳು ಕಂಡು ಬಂದಲ್ಲಿ ಆರೋಗ್ಯ ಇಲಾಖೆಯವರೇ ಖುದ್ದಾಗಿ ಎಫ್.ಐ.ಆರ್ ದಾಖಲಿಸಬೇಕು. ಯಾವುದೇ ಇಲಾಖೆಯ ಅಧಿಕಾರಿಗಳು ಬಾಲ್ಯವಿವಾಹ ಪ್ರಕರಣ ದಾಖಲಿಸಲು ಬಂದಾಗ, ಪೊಲೀಸ್ ಇಲಾಖೆಯಿಂದ ಮೊದಲ ಆದ್ಯತೆಯಲ್ಲಿ ಎಫ್.ಆರ್.ಐ ದಾಖಲಿಸಬೇಕು. ಬಾಲ್ಯ ವಿವಾಹ ನಿಷೇಧಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಾರ್ವಜನಿಕರಿಗೆ ಬಾಲ್ಯ ವಿವಾಹ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಬೇಕು ಎಂದು ಹೇಳಿದರು.

**ಪ್ರಸ್ತುತ ವರ್ಷದಲ್ಲಿ 7 ಬಾಲ್ಯ ವಿವಾಹ ಪ್ರಕರಣ ದಾಖಲು**

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಿಂಧು ಅಂಗಡಿ ಅವರು ಮಾತನಾಡಿ, ತಾಲೂಕಿನಲ್ಲಿ ಪ್ರಸ್ತುತ ವರ್ಷದಲ್ಲಿ 7 ಬಾಲ್ಯ ವಿವಾಹ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಪ್ರೋಬೆಷನರಿ ಕೆ.ಎ.ಎಸ್ ಅಧಿಕಾರಿ ಶ್ವೇತಾ, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಭಾಸ್ಕರ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಲತಾ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು, ಪೊಲೀಸ್ ವೃತ್ತ ನಿರೀಕ್ಷರು, ಸಾಂತ್ವಾನ ಕೇಂದ್ರ, ಡಾನ್ ಬಾಸ್ಕೋ ಸಂಸ್ಥೆಯ ಪ್ರತಿನಿಧಿನಿಗಳು, ಶಿಶು ಅಭಿವೃದ್ಧಿ ಯೋಜನೆ ಮಹಿಳಾ ಮೇಲ್ವಿಚಾರಕಿಯರು, ಮಕ್ಕಳ ಘಟಕದ ಸಿಬ್ಬಂದಿ ಉಪಸ್ಥಿತರಿದ್ದರು.

# ಹೆಂಡತಿ ಕೊಂದ ಪತಿಗೆ ಶಿಕ್ಷೆ

**9 ವರ್ಷ ಜೈಲು-1,10,000 ರೂ.ದಂಡ**

■ **ಹಂಪಿ ಟೈಮ್ಸ್ ರಾಯಚೂರು**

ಬೋಳಮಾನದೊಡ್ಡಿ ನಿವಾಸಿ ಹೊನ್ನಪ್ಪ ಎಂಬುವಾತ ಕುಡಿಯುವ ಚಟಕ್ಕೆ ಬಿದ್ದು, ದುಡಿದ ಹಣವನ್ನು ಕೊಡು ಅಂತಾ ತನ್ನ ಹೆಂಡತಿಗೆ ಪದ್ದಮ್ಮ@ ಬುಜ್ಜಮ್ಮ ಈಕೆಗೆ ಆಗಾಗ ದೈಹಿಕ ಮತ್ತು ಮಾನಸಿಕ ಕಿರುಕುಳ ಕೊಡುತ್ತಾ ಬಂದಿದ್ದು, ಆತನಿಗೆ ಕುಡಿಯಲು ಹಣ ಕೊಡಲಿಲ್ಲ ಎಂಬ ಕಾರಣಕ್ಕೆ 2019ರ ನ.28 ರಂದು ಮಧ್ಯಾಹ್ನ 1:00 ಗಂಟೆಗೆ ಅವರು ವಾಸವಾಗಿದ್ದ ಮನೆಯಲ್ಲಿ ತನ್ನ ಕಾಲುಗಳಿಂದ ತನ್ನ ಹೆಂಡತಿ ಕುತ್ತಿಗೆ ಮತ್ತು ಮೈ ಕೈಗೆ ಜೋರಾಗಿ ತುಳಿದು ಉಸಿರುಗಟ್ಟಿಸಿ ಕೊಲೆ ಮಾಡಿದ್ದ ಎಂದು ಮೃತಪಟ್ಟ ಮಹಿಳೆಯ ತಾಯಿ ಅನಂತಮ್ಮ ಅವರು ದೂರು ನೀಡಿದ್ದರು. ಅಂದಿನ ಪಿ.ಐ.ರವರಾದ ಮಲ್ಲಿಕಾರ್ಜುನ ಇಕ್ಕಳಿಕಿ ಇವರು ರಾಯಚೂರು ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿದ್ದರು. 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹತ್ತಿಕಾಳ್ ಪ್ರಭು ಎಸ್.ರವರು ಪ್ರಕರಣದ ಸಾಕ್ಷ್ಯಾಧಾರಗಳನ್ನು ಆಲಿಸಿ ಆರೋಪಿ ಹೊನ್ನಪ್ಪನಿಗೆ ಒಟ್ಟು 9 ವರ್ಷ ಜೈಲು ಶಿಕ್ಷೆ ಮತ್ತು 1,10,000 ರೂ.ಗಳ ದಂಡವನ್ನು ವಿಧಿಸಿ ಡಿ.05 ರಂದು ಆದೇಶ ಹೊರಡಿಸಿದ್ದಾರೆ. ಪ್ರಸ್ತುತ ಪಿಐ ಹಸನ್‌ಸಾಬ್ ಪ್ರಕರಣದ ಸಾಕ್ಷಿದಾರರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಸರ್ಕಾರದ ಪರವಾಗಿ ಸಾರ್ವಜನಿಕ ಅಭಿಯೋಜಕರಾದ ಸರ್ವಮಂಗಳ ವಾದ ಮಂಡಿಸಿದ್ದರು. ಎಂದು ಮಹಿಳಾ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು ತಿಳಿಸಿದ್ದಾರೆ.





**ಹೊಲ, ಗೋಡನ್ ಬಾಡಿಗೆಗೆ/ಲೀಸ್‌ಗೆ ಲಭ್ಯ**

ಹೊಸಪೇಟೆ ತಾಲೂಕಿನ ನಾಗೇನಹಳ್ಳಿಯಲ್ಲಿ ಬೋರ್‌ವೆಲ್ ನೀರು ಸಹಿತ 2 ಎಕರೆ ಹೊಲ ಮತ್ತು 25X60 ಚ.ಅಡಿ. 15 ಅಡಿ ಎತ್ತರ ಇರುವ ಗೋಡನ್ ಬಾಡಿಗೆ / ಲೀಸ್ ಕೊಡಲಾಗುವುದು. ಆಸಕ್ತರು ಸಂಪರ್ಕಿಸಿ.

9448493553








ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ, ಕೈಯಲ್ಲೊಂದು ಕನ್ನಡ ದಿನಪತ್ರಿಕೆ ಇರಲಿ

। ಡಿ.ವಿ.ಜಿ.

**ಮೈಕ್ರೋ ನ್ಯೂಸ್**

## ನಾಳೆ ಹಂಪಿಯಲ್ಲಿ ಫಲಪೂಜಾ ಸಾಂಸ್ಕೃತಿಕ ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ:** ಹಂಪಿ ಫಲಪೂಜಾ ನಿಮಿತ್ತ ಕಡ್ಡಿರಾಂಪುರದ ಶ್ರೀ ಮರಿದೇವ ಸಂಗೀತ ಸಾಂಸ್ಕೃತಿಕ ಕಲಾವೃಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗ ದೊಂದಿಗೆ ಡಿ.28 ರಂದು ಸಂಜೆ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ಅವರಣದಲ್ಲಿ ಸಂಜೆ 7ಕ್ಕೆ 26ನೇ ವರ್ಷದ ಭಕ್ತಿ ಭಾವನಾ ಸಂಗೀತ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಂಡಿದೆ.

ಹಂಪಿ ಶ್ರೀ ವಿದ್ಯಾರಣ್ಯ ಭಾರತಿ ಸ್ವಾಮೀಜಿ ಸಾನ್ನಿಧ್ಯವಹಿಸಲಿದ್ದಾರೆ. ಶಾಸಕ ಹೆಚ್.ಆರ್.ಗವಿಯಪ್ಪ ಉದ್ಘಾಟಿಸಲಿದ್ದಾರೆ. ಹಂಪಿ ಗ್ರಾಪಂ ಅಧ್ಯಕ್ಷೆ ರಜಿನಿ ಷಣ್ಮುಖ ಗೌಡ ಅಧ್ಯಕ್ಷತೆವಹಿಸುವರು. ಇಲಾಖೆಯ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ ಸೇರಿದಂತೆ ಅಧಿಕಾರಿಗಳು, ಜನಪ್ರತಿ ನಿಧಿಗಳು, ಕಲಾಪೋಷಕರು ಉಪಸ್ಥಿತರಿರಲಿದ್ದಾರೆ. ನಂತರ ವಿವಿಧ ಕಲಾತಂಡ ಹಾಗೂ ಕಲಾವಿದರಿಂದ ಸಂಗೀತ, ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಕಲಾವೃಂದದ ಸಂಸ್ಥಾಪಕ ಅಧ್ಯಕ್ಷ ಅಂಗಡಿ ವಾಮದೇವ ತಿಳಿಸಿದ್ದಾರೆ.

## ವಚನ ಅರಿವು

### ಬದುಕಿನ ಸಾರ

ನಿರ್ಣಯವನರಿಯದ ಮನವೆ,
ದುಗುಡವನಾಹಾರಗೊಂಡೆಯಲ್ಲಾ
ಮಾಯಾ ಸೂತ್ರವಿದೇನೋ!
ಕಂಗಳೊಳಗಣ ಕತ್ತಲೆ ತಿಳಿಯದಲ್ಲಾ!
ಬೆಳಗಿನೊಳಗಣ ಶೃಂಗಾರ ಬಳಲುತ್ತಿದ್ದುದು, ಗುಹೇಶ್ವರಾ.

– ಅಲ್ಲಮಪ್ರಭು

ಮನಸ್ಸಿನಲ್ಲಿ ಸ್ಪಷ್ಟವಾದ ಪ್ರಾಮಾಣಿಕತೆಯಿಂದ ಒಳ್ಳೆಯ ವಿಚಾರವನ್ನು ನಿರ್ಧರಿಸಿಕೊಂಡು ನಡೆಯದೆ ಇದ್ದರೆ ದುಃಖವನ್ನೆ ಆಹಾರ ಮಾಡಿಕೊಂಡು ನೋವನ್ನು ಉಂಡು ನರಳುವ ಸ್ಥಿತಿ ಬರುತ್ತದೆ. ಆಸೆ, ಆಮಿಷದಿಂದ ಮನುಷ್ಯ ಭ್ರಮೆಗೆ ಒಳಗಾಗಿ, ಆಸೆಯ ಕೈಗೊಂಬೆಯಾಗುತ್ತಾನೆ. ಭ್ರಮೆಯಿಂದ ಹೊರಬಂದು ಕಣ್ಣ ಮುಂದಿರುವ ಜೀವನದ ಸತ್ಯವನ್ನು ಅರಿತು, ಅರಿವಿನ ಬೆಳಕನ್ನು ಕಾಣಬೇಕು. ಮನುಷ್ಯ ಭ್ರಮೆಯಿಂದ ಬದುಕದೆ, ತಾನು ತನ್ನ ಕರ್ತವ್ಯವೇನೆಂದು ತಿಳಿದು ಬದುಕುವುದೇ ನಿಜವಾದ ಬದುಕಿನ ಸಾರ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ರಾಜ್ಯಮಟ್ಟದಲ್ಲಿ ಫ್ರೂಟ್ಸ್ ನೋಂದಣಿ: ಬಳ್ಳಾರಿ ಜಿಲ್ಲೆ ಆಗ್ರಸ್ಥಾನ

**ಹಂಪಿ ಟೈಮ್ಸ್ ಬಳ್ಳಾರಿ**

ರೈತರಿಗಾಗಿ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಫ್ರೂಟ್ಸ್ ನೋಂದಣಿಯಲ್ಲಿ ಬಳ್ಳಾರಿ ಜಿಲ್ಲೆ ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ರಾಜ್ಯ ಸರ್ಕಾರ ಈ ಕುರಿತು ಬಿಡುಗಡೆ ಮಾಡಿರುವ ವರದಿಯನ್ನು ನೋಡಿ ಹರ್ಷ ವ್ಯಕ್ತಪಡಿಸಿರುವ ಜಿಲ್ಲಾಧಿಕಾರಿಗಳು ನಮ್ಮ ಜಿಲ್ಲೆ ಇಡೀ ರಾಜ್ಯದಲ್ಲಿಯೇ ಅದ್ವಿತೀಯ ಸಾಧನೆ ಮಾಡಿದೆ. ಕಂದಾಯ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಬಳ್ಳಾರಿ ಜಿಲ್ಲಾಡಳಿತ ನೀಡಿದ ನಿಗದಿತ ಗುರಿಯನ್ನು ಯಶಸ್ವಿಯಾಗಿ ಸಾಧಿಸಿದ ಮೊದಲ ಜಿಲ್ಲೆಯಾಗಿದೆ ಎಂದು ತಿಳಿಸಿದ್ದಾರೆ.

ಬರಗಾಲ ಹಿನ್ನಲೆಯಲ್ಲಿ ರೈತರು ತಮ್ಮ ಬೆಳೆ ನಷ್ಟ ಪರಿಹಾರ ಪಡೆಯಲು ಮತ್ತು ರಾಜ್ಯ ಸರ್ಕಾರವು ಫ್ರೂಟ್ಸ್ ತಂತ್ರಾಂಶದ ಮೂಲಕ ಪರಿಹಾರ ಒದಗಿಸಲು ನೋಂದಣಿಯು ಕಡ್ಡಾಯವಾಗಿದ್ದು, ರೈತರಿಗೆ ಜಾಗೃತಿ ಮೂಡಿಸಿ, ಫ್ರೂಟ್ಸ್ ನೋಂದಣಿಯಲ್ಲೇ ಬಳ್ಳಾರಿ ಜಿಲ್ಲೆಯು ಆಗ್ರಸ್ಥಾನದಲ್ಲಿರುವುದು ವಿಶೇಷವಾಗಿದೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಂದಾಯ ಇಲಾಖೆ, ಕೃಷಿ ಮತ್ತು ತೋಟಗಾರಿಕೆ ಇಲಾಖೆ ಸಹಯೋಗದೊಂದಿಗೆ ರೈತರಿಗೆ ನಿರಂತರ ಅರಿವು ಮತ್ತು ಜಾಗೃತಿಯಿಂದ ಈ ಕಾರ್ಯವು ಯಶಸ್ವಿಗೊಂಡಿದೆ ಎಂದು ತಿಳಿಸಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಭೂಮಿ ತಂತ್ರಾಂಶದಲ್ಲಿ 456020 ಪ್ಲಾಟ್‌ಗಳಿವೆ. ಕೃಷಿಯೇತರ ಭೂಮಿ 58310 ಪ್ಲಾಟ್‌ಗಳು, ಖಾಸಗಿ ಭೂಮಿ 397918 ಪ್ಲಾಟ್‌ಗಳು, ಬೆಳೆ ಸಮೀಕ್ಷೆಗೆ ಒಳಪಟ್ಟ ಭೂಮಿ 47553 ಪ್ಲಾಟ್‌ಗಳು, ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಣಿ ಮಾಡಲಾದ ಭೂಮಿ 350365 ಪ್ಲಾಟ್‌ಗಳು, ಇದಕ್ಕೂ ಮೊದಲು ನೋಂದಣಿಯಾದ ಭೂಮಿ 294598 ಪ್ಲಾಟ್‌ಗಳು ಮತ್ತು 55767 ಪ್ಲಾಟ್‌ಗಳು ಬಾಕಿ ಇವೆ. ಒಟ್ಟು ಶೇಕಡ 84.08 ಪ್ರತಿಶತ ಸಾಧನೆ ಮಾಡುವ ಮೂಲಕ ಪ್ರಥಮ ಸ್ಥಾನದಲ್ಲಿದೆ.

ಫ್ರೂಟ್ಸ್ ನೋಂದಣಿಗೆ ಸಂಬಂಧಪಟ್ಟಂತೆ ಜಿಲ್ಲೆಯ ರೈತರಿಂದ ಉತ್ತಮವಾದ ಸ್ಪಂದನೆ ದೊರೆತಿದೆ. ನಿಗದಿತ ಗುರಿ ತಲುಪಿರುವುದು. ನಿಜಕ್ಕೂ ಸಂತೋಷದ ಸಂಗತಿ. ಕಂದಾಯ, ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಅಭಿನಂದನೆಗಳು ತಿಳಿಸಿದ್ದಾರೆ.


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 9448633038

# ಧಕ್ ಧಕ್...




# ನಾಲ್ವರು ಮಹಿಳೆಯರ ಬೈಕ್ ಎಕ್ಸ್‌ಪಿಡಿಶನ್ ಯಶೋಗಾಥೆ

ಆಕೆ ಸ್ಕೈ ಎಂದು ಕರೆಯಲ್ಪಡುವ ಸುಶೀಲ್ ಕುಮಾರಿ ಯಾದವ್. ವೃತ್ತಿಪರ ಫೋಟೋ, ವಿಡಿಯೋಗ್ರಾಫರ್ ಮತ್ತು ಬ್ಲಾಗರ್ ಆಗಿರುವ, ಬೈಕ್ ಸ್ಟಂಟ್ ನ ವಿಡಿಯೋಗಳನ್ನು ಮಾಡಿ ಅವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್ಲೋಡ್ ಮಾಡುವುದು ಆಕೆಯ ವೃತ್ತಿಯಾಗಿತ್ತು.ಬೈಕ್ ಗಳ ಬಿಡಿ ಭಾಗಗಳನ್ನು ಕೈಯಲ್ಲಿ ಹಿಡಿದೆ ಅವುಗಳ ಕುರಿತು ಸಮಗ್ರ ಮಾಹಿತಿಯನ್ನು ಒದಗಿಸುವಷ್ಟು ನಿಶ್ಣಾತ ವ್ಯಕ್ತಿ. ತನ್ನ ಜೊತೆಗಾರನಿಂದಲೇ ಮೋಸಕ್ಕೊಳಗಾದೆ ಎಂಬ ಭಾವವನ್ನು ಹೊಂದಿದ ಆಕೆ ಆತನಿಂದ ಬೇರ್ಪಟ್ಟಿರುತ್ತಾಳೆ. ಬಾರ್ಸಿಲೋನಾದಲ್ಲಿ ನಡೆಯುತ್ತಿರುವ ಆಟೋ ಎಕ್ಸ್ ಪೋದಲ್ಲಿ ಭಾಗವಹಿಸುವ ಆಕೆಯ ಮಹದಾಶಯವನ್ನು ಈಡೇರಿಸಲು ಆಕೆ ಒಪ್ಪಂದ ಮಾಡಿಕೊಂಡ ಮೋಟಾರು ವಾಹನ ಉದ್ಯಮಿ ಒಡ್ಡಿದ ಅತಿ ಹೆಚ್ಚು ಪ್ರತಿಕ್ರಿಯೆಯನ್ನು ನೀಡುವ ವಿಡಿಯೋಗಳನ್ನು ಅಪ್ಲೋಡ್ ಮಾಡಿ ತನ್ಮೂಲಕ ಆಟೋಮೊಬೈಲ್ ಕ್ಷೇತ್ರದಲ್ಲಿ ಸಂಚಲನವನ್ನು ಸೃಷ್ಟಿ ಮಾಡುವ ಸವಾಲನ್ನು ಸ್ವೀಕರಿಸುತ್ತಾಳೆ. ಅದರ ಭಾಗವಾಗಿಯೇ ಜಗತ್ತಿನ ಅತ್ಯಂತ ಎತ್ತರದ ವಾಹನ ಚಲಿಸಬಲ್ಲ (highest motorable place) ಏಕೈಕ ಸ್ಥಳವಾದ ಖಾರದುಂಗ್ಲ ಪಾಸ್ ಅನ್ನು ತನ್ನಂತೆಯೇ ತಮ್ಮ ವ್ಯಕ್ತಿತ್ವದ ಘನತೆಯನ್ನು ಅರಿತುಕೊಳ್ಳುವ ಹುನ್ನಾರದಲ್ಲಿದ್ದ ಇನ್ನಿತರ ಮೂರು ಜನರ ಜೊತೆ ಈಡೇರಿಸಿಕೊಂಡ ಕಥೆಯೇ ಖ್ಯಾತ ಅಭಿನೇತ್ರಿ ತಾಪ್ಸಿ ಪನ್ನು ನಿರ್ಮಿಸಿರುವ ಧಕ್ ಧಕ್ ಎಂಬ ಹಿಂದಿ ಚಲನಚಿತ್ರ.



ಮಾಹಿ (ಮನ ಪ್ರೀತ್ ಕೌರ್ ಸೇಠೀ) ಪತಿಯ ಮರಣದ ನಂತರ ತನಗೆ ದೊರೆಯಬೇಕಾದ ಪೆನ್ಷನ್ ಹಣಕ್ಕಾಗಿ ಕಚೇರಿಗಳಿಗೆ ಓಡಾಡುತ್ತಿರುವ ವೃದ್ಧ ಹೆಣ್ಣು ಮಗಳು.ತಾಯಿ ಎಂದರೆ ಸಹಜವಾಗಿಯೇ ಟೇಕನ್ ಫಾರ್ ಗ್ರಾಂಟೆಡ್ ಎಂಬಂತಿರುವ ಆಕೆಯ ಹೆಣ್ಣು ಮಕ್ಕಳು ಆಕೆಯಲ್ಲಿ ನಿರಾಶೆಯನ್ನು ಹುಟ್ಟಿಸಿದ್ದರು. ಲಾಟರಿಯೊಂದರಲ್ಲಿ ಆಕೆಗೆ ದೊರೆತದ್ದು ಬುಲೆಟ್ ಬೈಕ್. ಪೆನ್ಷನ್ ಗಾಗಿ ಅಲೆದಾಡುವಾಗ ಉಂಟಾಗುವ ಸಂಚಾರದ ಅಡಚಣೆಯನ್ನು ತಪ್ಪಿಸಲು ಮನೆಯ ಮುಂದೆ ಧೂಳು ತಿನ್ನುತ್ತಾ ಬಿದ್ದ ತನ್ನ ಬೈಕನ್ನು ಕಲಿಯುವ ಆಶಯ ವ್ಯಕ್ತಪಡಿಸಿದ ಮಾಹಿಗೆ ಆಕೆಯ ಮೊಮ್ಮಗ ಪ್ರಭಜಿತ್ ಸಾತ್ ನೀಡಿದ ಪರಿಣಾಮವಾಗಿ ಕೆಲವೇ ದಿನಗಳಲ್ಲಿ ಆಕೆ ಬೈಕ್ ಓಡಿಸುವಲ್ಲಿ ಪರಿಣತಳಾಗಿ ಸಾಮಾಜಿಕವಾಗಿ ಗುರುತಿಸಲ್ಪಡುತ್ತಾಳೆ.

ಅದೊಂದು ದಿನ ಅಜ್ಜಿಯ ಬೈಕನ್ನು ಬೈಕರ್ ಕ್ಲಬ್ ನಡೆಸುವ ಬೈಕಿಂಗ್ ಸ್ಟಂಟ್ ನೋಡಲು ತೆಗೆದುಕೊಂಡು ಹೋಗುವ ಮಾಹೀಯ ಮೊಮ್ಮಗ ಪ್ರಭಜಿತ್ ಆಕಸ್ಮಿಕವಾಗಿ ಸ್ಕೈಯನ್ನು ಭೇಟಿಯಾದಾಗ ತಾನು ಬಳಸುತ್ತಿರುವ ಬೈಕ್ ತನ್ನ ಅಜ್ಜಿಯದು ಎಂದು ಸ್ಕೈಗೆ ಹೇಳುತ್ತಾನೆ. ಆಶ್ಚರ್ಯಚಕಿತಳಾದ ಸ್ಕೈ ಮಾಹಿಯನ್ನು ಭೇಟಿಯಾಗುವ ಆಶಯ ವ್ಯಕ್ತಪಡಿಸುತ್ತಾಳೆ. ಅಂತೆಯೇ ಮಾಹಿಯನ್ನು ಭೇಟಿಯಾದಾಗ ಮಾಹಿ ಖಾರದುಂಗ್ಲಾ ಪಾಸನ್ನು ಬೈಕ್ ನಲ್ಲಿ ಕ್ರಮಿಸುವ ತನ್ನ ಆಶಯವನ್ನು ಹೇಳಿಕೊಳ್ಳಲು, ಮೊದಲು ಇದನ್ನು ವಿರೋಧಿಸಿದ ಸ್ಕೈ ತನ್ನ ವೈಯುಕ್ತಿಕ ಅಭಿಲಾಷೆಗಾಗಿ ನಂತರ ಮಾಹಿಗೆ ಸಹಾಯ ಮಾಡುವುದಾಗಿ ಹಸಿರು ನಿಶಾನೆ ತೋರುತ್ತಾಳೆ.

ತನ್ನ ಗ್ರೇಟೆಸ್ಟ್ ಬೈಕ್ ಎಕ್ಸ್ ಪಿಡಿಶನ್ ಗೆ ದಾಖಲಾಗಲು ಮಾಹೀಯ ವಿಡಿಯೋ ಮಾಡಿ ಸೋಶಿಯಲ್ ಮೀಡಿಯಾಗಳಿಗೆ ಅಪ್ಲೋಡ್ ಮಾಡಿದ ಸ್ಕೈ ಗೆ ತನ್ನ ತಾಯಿಯ ಬೆಚ್ಚಗಿನ ರಕ್ಷಣೆಯಲ್ಲಿ ಬೆಳೆದ ಮಂಜರಿ ಎಂಬ ವ್ಯಕ್ತಿ ಮನೆಯಲ್ಲಿ ಕುಟುಂಬಕ್ಕೆ ಆಪ್ತರಾದ ಮಾರ್ಥಾ ಅವರ ಸಲಹೆಯಂತೆ, ಅವರನ್ನು ಭೇಟಿಯಾಗಲು ಹೋಗುತ್ತೇನೆ ಎಂದು ಸುಳ್ಳು ಹೇಳಿ ಇವರನ್ನು ಜೊತೆಯಾಗುತ್ತಾಳೆ.

ಜಗತ್ಪ್ರಸಿದ್ಧ ಹಿಂದೂಸ್ತಾನ್ ಮೋಟರ್ಸ್ ನ ಮಾಲೀಕರ ಮಗಳಾದ ಉಜ್ಮಾ ಪತಿಯ ಉಪೇಕ್ಷೆಗೆ ಒಳಗಾಗಿರುವ ಮಹಿಳೆ. ಮೆಕ್ಯಾನಿಸಂನ ಎಲ್ಲಾ ತಂತ್ರಗಳನ್ನು ಕರಗತ ಮಾಡಿಕೊಂಡಿದ್ದರೂ ಕೂಡ ಸದಾ ಪತಿಯ ನೆರಳಿನಲ್ಲಿಯೇ ಜೀವಿಸುವಂತಹ ಪರಿಸ್ಥಿತಿ ಆಕೆಯದು. ಪೂರ್ವಗ್ರಹ ಪೀಡಿತ ಪತಿ ಯಿಂದಾಗಿ ತನ್ನ ಪರಿಸ್ಥಿತಿಯೇ ಮುಂದೆ ತನ್ನ ಮಗಳಿಗೆ ಒದಗಬಹುದು ಎಂಬ ಭಯದಿಂದ ಮುಕ್ತಳಾಗಲು, ಮಗಳಿಗೆ ಅವಶ್ಯಕವಿರುವ ಆಕೆಯ ಶಾಲೆಯಲ್ಲಿ ಹೇಳಿದ ಲ್ಯಾಪ್ಟಾಪ್ ಕೊಡಿಸಲು ಅನುಕೂಲವಾಗಲಿ ಎಂಬ ಆಶಯದಿಂದ ಮೆಕ್ಯಾನಿಕ್ ಆಗಿ ಈ ಈ ಗುಂಪನ್ನು ಸೇರಿಕೊಳ್ಳುತ್ತಾಳೆ ಉಜ್ಮಾ. ಆಕೆಯೂ ಕೂಡ ತನ್ನ ಗಂಡನಿಗೆ ತನ್ನ ಸ್ನೇಹಿತೆಯೊಂದಿಗೆ ಅಜ್ಮೀರ್ ನ ಷರೀಫ್ ದರ್ಗಾ ಗೆ ಒಂದು ವಾರದ ಮಟ್ಟಿಗೆ ಹೋಗಿ ಬರುವುದಾಗಿ ಸುಳ್ಳು ಹೇಳಿರುತ್ತಾಳೆ.

ಸ್ಕೈ ಅತ್ಯಂತ ದಿಟ್ಟ ವ್ಯಕ್ತಿತ್ವದ ಯುವ ಬ್ಲಾಗರ್ ಆದರೆ, ಅತ್ಯಂತ ಉಪೇಕ್ಷಿತ ಮಧ್ಯ ವಯಸ್ಸಿನ ಮಹಿಳೆ ಉಜ್ಮಾ, ಪುಕ್ಕಲುತನ ಮತ್ತು ಕೀಳರಿಮೆಯಿಂದ ಬಳಲುತ್ತಿರುವ ಪುಟ್ಟ ಯುವತಿ ಮಂಜರಿ, ಎಲ್ಲರಿಗೂ ಹಿರಿಯ ಸ್ಥಾನದಲ್ಲಿರುವ ದಿಟ್ಟ ಪಂಜಾಬಿ ವೃದ್ಧ ಮಹಿಳೆ ಮಾಹಿ ಹೀಗೆ ಯಾವುದೇ ರೀತಿಯಲ್ಲಿಯೂ ಪರಸ್ಪರ ಹೊಂದಾಣಿಕೆಯಲ್ಲದ ಜೀವನ ಶೈಲಿಯನ್ನು ಹೊಂದಿರುವ ಆದರೆ ತಮ್ಮ ವ್ಯಕ್ತಿತ್ವದ ಘನತೆಯನ್ನು ಕಂಡುಕೊಳ್ಳುವ ಆಶಯ ಮತ್ತು ಏಕಮನಸ್ಕತೆ ಹೊಂದಿರುವ ನಾಲ್ವರು ಮಹಿಳೆಯರ ಯಶೋಗಾಥೆಯೇ ಧಕ್ ಧಕ್ ಚಲನಚಿತ್ರ.

ಕೇವಲ ಏಳು ದಿನಗಳಲ್ಲಿ ದೆಹಲಿಯಿಂದ ಖಾರ್ದುಂಗ್ಲಾ ಪಾಸ್ ತಲುಪಬೇಕೆನ್ನುವ ಅವರ ಆಶಯಕ್ಕೆ ಮೊದಲ ದಿನವೇ ವ್ಯತ್ಯಯ ಉಂಟಾಗುತ್ತದೆ. ಒಬ್ಬರ ಹಿಂದೆ ಒಬ್ಬರು ಬೈಕ್ ನಲ್ಲಿ ಹೋಗುತ್ತಿರುವಾಗ ಅಕಸ್ಮಾತಾಗಿ ಅವರಿಂದ ಬೇರ್ಪಡುವ ಮಂಜರಿ ತನ್ನ ಮೊಬೈಲನ್ನು ಕಳೆದುಕೊಂಡು ಕೊನೆಗೆ ಅವರನ್ನು ಸೇರುವ ವೇಳೆಗೆ ಮರುದಿನವಾಗುತ್ತದೆ. ಮುಂದೆ ಅವರ ಪ್ರಯಾಣ ಹಲವಾರು ಏರುಪೇರುಗಳನ್ನು ಕಾಣುತ್ತಾ ಸಾಗುತ್ತದೆ. ಈ ಮಧ್ಯದಲ್ಲಿ ಅವರು ಮಾತನಾಡಿದ ಖಾಸಗಿ ಮಾತುಗಳನ್ನು ವಿಡಿಯೋ ಚಿತ್ರೀಕರಣ ಮಾಡಿದ ತಂಗಿದ ಹೋಟೆಲಿನ ಮಾಲೀಕ ಅದನ್ನು ಸಾಮಾಜಿಕ ಜಾಲತಾಣಗಳಿಗೆ ಅಪ್ಲೋಡ್ ಮಾಡಿದ್ದು ಅದನ್ನು ವೀಕ್ಷಿಸಿದ ಮಂಜರಿ ಮತ್ತು ಉಜ್ಮಾ ಮನೆಯವರು ಕೋಪಗೊಳ್ಳುತ್ತಾರೆ. ಆದರೆ ಇದಾವುದರಿಂದಲೂ ವಿಚಲಿತಗೊಳ್ಳದ ಸ್ಥಿತಿಯಲ್ಲಿದ್ದ ನಾಲ್ವರು ಮಹಿಳೆಯರು ದಿಟ್ಟತನದಿಂದ ಮುನ್ನಡೆಯುತ್ತಾರೆ. ಅವರವರ ವೈಯುಕ್ತಿಕ ಬದುಕಿನ ಸಂಘರ್ಷಗಳನ್ನು ಹೇಳಿಕೊಂಡ ಅವರು ಹಗುರಾಗುತ್ತಾರೆ. ಅವರೆಲ್ಲರ ನಡುವಿನ ಭಿನ್ನಾಭಿಪ್ರಾಯಗಳು ಕಡಿಮೆಯಾಗುತ್ತಾ ಹೋಗುತ್ತವಾದರೂ ಆರನೆಯ ದಿನ ಅದೊಂದು ಕಡಿದಾದ ರಸ್ತೆಯನ್ನು ದಾಟುವಾಗ ಒಮ್ಮಿಂದೊಮ್ಮೆಲೆ ಉಂಟಾದ ಪ್ರವಾಹದಲ್ಲಿ ಸ್ಕೈ ತನ್ನ ಬೈಕನ್ನು ಮತ್ತು ತನ್ನ ಅದುವರೆಗಿನ ಎಲ್ಲಾ ಚಿತ್ರೀಕರಣಗಳನ್ನು ಹಿಡಿದಿಟ್ಟುಕೊಂಡಿದ್ದ ಕ್ಯಾಮೆರಾ ನೀರಿನಲ್ಲಿ ಕೊಚ್ಚಿ ಹೋಗುವುದನ್ನು ನೋಡಿ ಅತೀವ ನಿರಾಶೆ ಮತ್ತು ದುಃಖದಿಂದ ಇವರ ಗುಂಪಿನಿಂದ ಹೊರಬೀಳುತ್ತಾಳೆ. ಆಕೆಯಲ್ಲಿ ಮತ್ತೆ ಉತ್ಸಾಹ ತುಂಬುವಲ್ಲಿ ವಿಫಲರಾದ ಉಳಿದ ಮೂವರು ಗಮ್ಯ ಸ್ಥಾನಕ್ಕೆ ಕೆಲವೇ ಕೆಲವು ಕಿಲೋಮೀಟರ್ಗಳಷ್ಟು ದೂರದಲ್ಲಿರುವಾಗ ವೃದ್ಧ ಮಾಹೀಗೆ ದೇಹದಲ್ಲಿ ಆಕ್ಸಿಜನ್ ಕೊರತೆ ಉಂಟಾಗಿ ಆಸ್ಪತ್ರೆಗೆ ದಾಖಲು ಮಾಡುತ್ತಾರೆ.

ಆಕೆಗೆ ಬೇಕಾದ ಆಕ್ಸಿಜನ್ ಸಿಲಿಂಡರನ್ನು ಒದಗಿಸಲು ಹೋಗುವ ಮಂಜರಿ ತಾನು ಭೇಟಿಯಾಗಲು ಬಂದ ಮಾರ್ತಾಳ ಬಳಿ ಹೋಗಿ ಸಿಲಿಂಡರ್ ಪಡೆದುಕೊಳ್ಳುವ ಸಮಯದಲ್ಲಿ ತನ್ನ ತಾಯಿಯ ಕೈಗೆ ಸಿಕ್ಕಿ ಬೀಳುತ್ತಾಳೆ. ಇತ್ತ ತನ್ನ ಬೈಕ್ ಕಳೆದುಹೋಗಿದೆ ಎಂದು ಕೊಟ್ಟ ದೂರಿನ ಮೇರೆಗೆ ಸಿಲಿಂಡರ್ ಪಡೆದುಕೊಂಡು ಆಸ್ಪತ್ರೆಗೆ ಮರಳುತ್ತಿದ್ದ ಉಜ್ಮಾಳನ್ನು ಪೊಲೀಸ್ ಅಧಿಕಾರಿಗಳು ತಮ್ಮ ವಶಕ್ಕೆ ಪಡೆದುಕೊಳ್ಳುತ್ತಾರೆ. ಅತ್ತ ದೆಹಲಿ ತಲುಪಿದ ಸ್ಕೈಗೆ ಕೂಡ ವಿಷಯ ತಿಳಿದು ಆಕೆಯೂ ಕೂಡ ಆಕ್ಸಿಜನ್ ಸಿಲಿಂಡರ್ ನೊಂದಿಗೆ ಧಾವಿಸಿ ಬರುತ್ತಾಳೆ. ಇದೀಗ ಉಜ್ಮಾ ಮತ್ತು ಮಂಜರಿ ತಂತಮ್ಮ ಮನೆಯವರನ್ನು ಧೈರ್ಯವಾಗಿ ಮಾತನಾಡಿ ತಮ್ಮನ್ನು ತಾವು ಸಾಬೀತುಪಡಿಸಿ ಆಕ್ಸಿಜನ್ ಸಿಲೆಂಡರ್ ನೊಂದಿಗೆ ಆಸ್ಪತ್ರೆ ತಲುಪುತ್ತಾರೆ. ಮುಂದಿನ ಮೂರು ದಿನಗಳಲ್ಲಿ ಸಂಪೂರ್ಣ ಗುಣಮುಖಳಾದ ಮಾಹಿಯೊಂದಿಗೆ ಆಕೆ ಈ ಮೊದಲು ಖರೀದಿಸಿದ ಒಂದೇ ರೀತಿಯ ಜಾಕೆಟ್ ಗಳನ್ನು ತೊಟ್ಟ ನಾಲ್ವರು ಬೈಕೇರಿ ತಮ್ಮ ಗಮ್ಯ ಸ್ಥಾನ ಖಾರ್ದೂಂಗ್ಲಾ ಪಾಸ್ ಅನ್ನು ತಲುಪಿ ತಮ್ಮ ಅಭೂತಪೂರ್ವ ಯಶಸ್ಸನ್ನು ಸಂಭ್ರಮಿಸುತ್ತಾರೆ. ಭಾವನಾತ್ಮಕವಾಗಿ ಸಂಚಲನವನ್ನು ಸೃಷ್ಟಿಸುವ ಅವರ ಈ ಯಶಸ್ಸು ಅವರ ಬಾಳಿನಲ್ಲಿ ಒಂದು ಹೊಸ ಅಧ್ಯಾಯವನ್ನು ಬರೆಯುತ್ತದೆ. ಎಲ್ಲರೂ ಅವರವರ ಜೀವನದಲ್ಲಿ ಅವರು ಬಯಸಿದ ರೀತಿಯಲ್ಲಿ ಮುಂದೆ ಸಾಗುತ್ತಾರೆ.

ಚಾರಣ ಮನುಷ್ಯ ಬದುಕಿನ ಆರೋಹಣ ಅವರೋಹಣಗಳಿಗೆ ಸಾಕ್ಷಿಯಾಗುತ್ತದೆ. ಎಲ್ಲರೂ ಹೇಳುವುದನ್ನು ಕೇಳಬೇಕು ಆದರೆ ಆತ್ಮಸಾಕ್ಷಿ ಒಪ್ಪುವುದನ್ನು ಮಾಡಬೇಕು, ಬೇರೆಯವರು ನಮ್ಮನ್ನು ಗೌರವಿಸುತ್ತಿಲ್ಲ ಎಂದು ಹಲುಬದೆ, ನಮ್ಮ ಗಟ್ಟಿತನದಿಂದ ನಮ್ಮ ವ್ಯಕ್ತಿತ್ವವನ್ನು ನಾವೇ ನಿರ್ಮಿಸಿಕೊಳ್ಳುವಮೂಲಕನಮ್ಮಆತ್ಮಗೌರವವನ್ನುಕಾಪಾಡಿಕೊಳ್ಳಬೇಕು. ಹೆಣ್ಣು ಮಕ್ಕಳು ಮನಸು ಮಾಡಿದರೆ ಜಾತಿ ಧರ್ಮ ವಯಸ್ಸು ಇವುಗಳ ಹಂಗನ್ನು ತೊರೆದು ಏನನ್ನು ಬೇಕಾದರೂ ಸಾಧಿಸಬಲ್ಲರು ಎಂಬುದಕ್ಕೆ ಸಾಕ್ಷಿಯಾಗಿ ನಿಂತಿದೆ ಧಕ್ ಧಕ್ ಚಲನಚಿತ್ರ. ಈ ನಾಲ್ವರು ಹೆಣ್ಣು ಮಕ್ಕಳ ಯಶೋಗಾಥೆಯ ರೋಚಕತೆಯನ್ನು ಅನುಭವಿಸಲು ಒಮ್ಮೆ ನೋಡಿ ....ಪ್ರೇರಿತರಾಗಿ.




**– ವೀಣಾ ಹೇಮಂತಗೌಡ ಪಾಟೀಲ್,**
**ಮುಂಡರಗಿ, ಗದಗ**

## ಜಿಲ್ಲೆಯ ಅಭಿವೃದ್ಧಿಗಾಗಿ ಅಧಿಕಾರಿಗಳು ಶ್ರಮಿಸಿ: ಡಾ.ಕೆ.ವಿ.ತ್ರಿಲೋಕ ಚಂದ್ರ ಸೂಚನೆ

**ಮೊದಲ ಪುಟದಿಂದ**

ಮಕ್ಕಳಲ್ಲಿನ ಕಲಿಕೆಯ ಗುಣಮಟ್ಟವನ್ನು ಕಾಯ್ದುಕೊಂಡು, ಜಿಲ್ಲೆಯನ್ನು ಶೈಕ್ಷಣಿಕವಾಗಿ ಮುಂಚೂಣಿಯಲ್ಲಿರಲು ಶ್ರಮಿಸಬೇಕು ಎಂದು ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ಉಮಾದೇವಿ ಅವರು ಮಾತನಾಡಿ, ಮಕ್ಕಳಿಗೆ ಗುಣಮಟ್ಟ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದ್ದು, ಓದು-ಬರಹ, ಕಲಿಕೆ, ನಲಿ ಕಲಿ ಸೇರಿದಂತೆ ಇತರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಜಿಲ್ಲೆಯಲ್ಲಿ ಅಕ್ರಮವಾಗಿ ಮರಳು ಸಾಗಣೆ ದಂಧೆ ನಡೆಯುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಬಳ್ಳಾರಿ ತಾಲ್ಲೂಕಿನ ಮೋಕಾ, ವಣೆನೂರು, ಯಾಳ್ಪಿ ಗ್ರಾಮ ವ್ಯಾಪ್ತಿಯಲ್ಲಿ ನಡೆಯುತ್ತಿದ್ದು, ರಾತ್ರಿ ವೇಳೆ ಗಸ್ತು ಕಾರ್ಯಾಚರಣೆ ನಡೆಸಲಾಗುತ್ತಿದೆ ಮತ್ತು ಅಂತಹ ಪ್ರಕರಣ ಕಂಡುಬಂದಲ್ಲಿ ದಂಡ ವಿಧಿಸುತ್ತಿದೆ ಎಂದು ಇಲಾಖೆಯ ಅಧಿಕಾರಿಯೊಬ್ಬರು ಸಭೆಗೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅವರು, ಕೇವಲ ದಂಡ ವಿಧಿಸುವುದಲ್ಲ ಬದಲಾಗಿ ಪ್ರಕರಣ ದಾಖಲಿಸಿಕೊಂಡು ಶಿಕ್ಷೆ ವಿಧಿಸಬೇಕು ಎಂದು ಸೂಚಿಸಿದರು.

ಜಿಲ್ಲೆಯಲ್ಲಿ ಈವರೆಗೆ 5 ಕೋರೋನಾ ಪ್ರಕರಣ ಕಂಡುಬಂದಿದ್ದು, ಅವರಿಗೆ ಹೋಮ್ ಕ್ವಾರೆಂಟೈನ್‌ನಲ್ಲಿರಿಸಿ ಅಗತ್ಯ ಚಿಕಿತ್ಸೆ ನೀಡಲಾಗುತ್ತಿದೆ. ಪ್ರತಿದಿನ 120 ರಿಂದ 200 ರವರೆಗೆ ತಪಾಸಣೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಭಯಪಡುವಂತವಹ ಸ್ಥಿತಿ ಎದುರಾಗಿಲ್ಲ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ರಮೇಶ್ ಬಾಬು ಅವರು ಸಭೆಗೆ ವಿವರಿಸಿದರು.

ಇದಕ್ಕೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಕೆ.ವಿ.ತ್ರಿಲೋಕ ಚಂದ್ರ ಅವರು, ಜಿಲ್ಲೆಯಲ್ಲಿ ಜಿಂದಾಲ್ ಇರುವುದರಿಂದ ತೋರಣಗಲ್ಲು ಪಟ್ಟಣಕ್ಕೆ ರಾಷ್ಟ್ರಮಟ್ಟದಲ್ಲಿ ಬಂದು ಹೋಗುವವರು ಹೆಚ್ಚಿರುವ ಕಾರಣಕ್ಕೆ ಅಲ್ಲಿ ಹೆಚ್ಚಿನ ನಿಗಾವಹಿಸಬೇಕು, ಜಿಲ್ಲೆ ಜಿಲ್ಲೆ ರಾಜ್ಯ ಮಟ್ಟದ ಗಡಿಗಳನ್ನು ಹೊಂದಿರುವ ಕಾರಣಕ್ಕೆ ಹೊರಹೋಗುವವರ ಮತ್ತು ಒಳಬರುವವರ ಬಗ್ಗೆ ನಿಗಾವಹಿಸಬೇಕು ಹಾಗೂ ಇನ್ನೂ ಹೆಚ್ಚಿನ ತಪಾಸಣೆ ಕೈಗೊಳ್ಳಬೇಕು. ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಲ್ಲಿ ಅಗತ್ಯ ಔಷಧಿ ದಾಸ್ತಾನು ಸಂಗ್ರಹಣೆ ಇಟ್ಟುಕೊಳ್ಳಬೇಕು ಎಂದು ಹೇಳಿದರು.

ಸಭೆಯಲ್ಲಿ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಸಾಮಾಜಿಕ ಅರಣ್ಯ ಇಲಾಖೆ, ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ, ಅಲ್ಪ ಸಂಖ್ಯಾತರ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಕುರಿತು ಚರ್ಚೆ ನಡೆಸಿದರು. ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಐದನೇ ಗ್ಯಾರಂಟಿ ಯೋಜನೆಯಾದ ಯುವನಿಧಿ ಯೋಜನೆಗೆ ನೋಂದಣಿ ಕುರಿತ ಪೋಸ್ಟರ್ ಬಿಡುಗಡೆ ಮಾಡಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಸಹಾಯಕ ಆಯುಕ್ತ ಹೇಮಂತ್ ಕುಮಾರ್ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಬೇವೂರಿನಲ್ಲಿ ಕಂದಾಯ ಕೇಂದ್ರ ಲೋಕಾರ್ಪಣೆ

## ಕಂದಾಯ ಸಚಿವ ಕೃಷ್ಣ ಭೈರೇಗೌಡರಿಂದ ಉದ್ಘಾಟನೆ | ಬಸವರಾಜ ರಾಯರೆಡ್ಡಿ ಒತ್ತಾಯಕ್ಕೆ ಮುಖ್ಯಮಂತ್ರಿಗಳ ಸಮ್ಮತಿ

**ಹಂಪಿ ಟೈಮ್ಸ್ ಕೊಪ್ಪಳ**

ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರೆಡ್ಡಿ ಅವರ ವಿಶೇಷ ಪ್ರಯತ್ನದಿಂದಾಗಿ ಬೇವೂರಿನಲ್ಲಿ ಕಂದಾಯ ಇಲಾಖೆಯ ವಿಸ್ತರಣಾ ಕೇಂದ್ರವನ್ನು ವಿದ್ಯುಕ್ತವಾಗಿ ಉದ್ಘಾಟನೆ ಮಾಡುವಂತಾಗಿದೆ ಎಂದು ಕಂದಾಯ ಸಚಿವರಾದ ಕೃಷ್ಣ ಭೈರೇಗೌಡ ಅವರು ಹೇಳಿದರು.

ಡಿಸೆಂಬರ್ 26ರಂದು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಬೇವೂರ ಗ್ರಾಮದಲ್ಲಿ ಯಲಬುರ್ಗಾ ಹೋಬಳಿ ವಿಸ್ತರಣಾ ಕೇಂದ್ರದ ನೂತನ ಕಚೇರಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಸವರಾಜ ರಾಯರೆಡ್ಡಿ ಅವರು ಕೆಲಸಕ್ಕಾಗಿ ಮಾತು ಕೊಡುವ ವ್ಯಕ್ತಿತ್ವ ಹೊಂದಿದವರು. ಬೇವೂರನಲ್ಲಿ ನೂತನವಾಗಿ ವಿಸ್ತರಣಾ ಕೇಂದ್ರ ಮಾಡೇ ಮಾಡುತ್ತೇನೆಂದುರಾಯರೆಡ್ಡಿ ಅವರು ಮಾತು ಕೊಟ್ಟಿದ್ದರು. ಅವರು ಜನರಿಗೆ ಮಾತು ಕೊಟ್ಟಿರುವುದನ್ನು ನಾವು ಉಳಿಸಬೇಕು. ರಾಯರೆಡ್ಡಿ ಅವರ ಒತ್ತಾಯಕ್ಕೆ ಮಣಿದು ಮುಖ್ಯಮಂತ್ರಿಗಳು ವಿಶೇಷ ವಿನಾಯಿತಿ ನೀಡಿ ಬೇವೂರನಲ್ಲಿ ವಿಸ್ತರಣಾ ಕೇಂದ್ರದ ಆರಂಭಕ್ಕೆ ಸಮ್ಮತಿ ನೀಡಿದ್ದಾರೆ ಎಂದು ತಿಳಿಸಿದರು.

ಒಳ್ಳೆಯ ರಾಜಕೀಯ ಪರಂಪರೆ ಇರುವ ನಾಡು ನಮ್ಮದು. ಆಡಳಿತದಲ್ಲಿ ಇಡಿ ದೇಶಕ್ಕೆ ಮಾದರಿಯಾದ ರಾಜ್ಯ ನಮ್ಮದು. ಕಾಲಾನಂತರದಲ್ಲಿ ಕೆಲವು ಬದಲಾವಣೆಗಳಾಗಿವೆ. ರಾಜಕೀಯ ವಾತಾವರಣ ನೋಡಿದರೆ ಮೊದಲು ಇದ್ದಂತ ಘನತೆ ಗೌರವ ಈಗ ಕಡಿಮೆ ಆಗಿದೆ. ರಾಜಕೀಯ ವ್ಯಕ್ತಿಗಳಲ್ಲಿ ಇದ್ದಂತಹ ಗುಣ ನಡತೆಗಳು ಸಹ ಕಾಲಕ್ಕೆ ತಕ್ಕಂತೆ ಬದಲಾವಣೆಗಳಾಗಿವೆ. ಇದೆಲ್ಲದರ ನಡುವೆಯೂ ಸಾರ್ವಜನಿಕ ಜೀವನದಲ್ಲಿ ನಮ್ಮ ಕೆಲಸವನ್ನು ನಾವು



ಮುಂದುವರೆಸಿಕೊಂಡು ಹೋಗಲೇಬೇಕಿದೆ. ರಾಜಕೀಯ ಜೀವನದಲ್ಲಿ ಅನೇಕ ಹಿರಿಕರೊಡನೆ ರಾಯರೆಡ್ಡಿ ಅವರು ಕಾರ್ಯ ನಿರ್ವಹಿಸಿದ್ದಾರೆ. ಒಟ್ಟಾರೆ ರಾಜಕೀಯ ಜೀವನಕ್ಕೆ ಕರ್ನಾಟಕದಲ್ಲಿ ಬಸವರಾಜ ರಾಯರೆಡ್ಡಿ ಅವರು ಆಸ್ತಿ ಎಂದು ಕೃಷ್ಣ ಭೈರೇಗೌಡ ಅವರು ರಾಯರೆಡ್ಡಿ ಅವರ ವ್ಯಕ್ತಿತ್ವವನ್ನು ಬಣ್ಣಿಸಿದರು.

ರಾಜ್ಯದಲ್ಲಿ ಈ ರೀತಿಯಲ್ಲಿ ಹೊಸ ಹೋಬಳಿಯನ್ನಾಗಿ ಮಾಡಬೇಕು ಎಂದು ಸಾಕಷ್ಟು ಕಡೆ ಬೇಡಿಕೆ ಇದೆ. ಹೊಸ ತಾಲೂಕುಗಳ ಹೊಸ ಜಿಲ್ಲೆಗಳ ಬೇಡಿಕೆ ಇದೆ. ಆದರೆ ಈ ಹಿಂದೆ ಘೋಷಿಸಿದ ಕೆಲವ ತಾಲೂಕುಗಳಿಗೆ ಸಹ ಮೂಲಭೂತ ಸೌಕರ್ಯ ಕಲ್ಪಿಸುವುದು ಇನ್ನೂ ಬಾಕಿ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ಬರೀ ಹೊಸ ತಾಲೂಕು ಘೋಷಣೆ ಮಾಡಿದರೆ ಸಾಲದು ಅದಕ್ಕೆ ಮೂಲಭೂತ ಸೌಕರ್ಯ ಕಲ್ಪಿಸುವುದರ ಬಗ್ಗೆ ಯೋಚಿಸಿ ಘೋಷಣೆ ಮಾಡುವುದು ಸೂಕ್ತ ನ್ಯಾಯ ಎಂಬುದಾಗಿ ಮುಖ್ಯಮಂತ್ರಿಗಳು ನಿಲುವು ತೆಗೆದುಕೊಂಡಿದ್ದಾರೆ ಎಂದು ಅವರು ತಿಳಿಸಿದರು.

ಶಾಸಕ ಬಸವರಾಜ ರಾಯರೆಡ್ಡಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಬೇವೂರಿನಲ್ಲಿ ಒಂದು ಹೋಬಳಿ ಕೇಂದ್ರವಾಗಿ ಜನತೆಗೆ ಕಂದಾಯ ಇಲಾಖೆಯ ಸೇವೆ ಸಿಗಲಿ ಎನ್ನುವ ಒತ್ತಾಯ ಈ ಭಾಗದಲ್ಲಿ ಎರಡ್ಮೂರು ವರ್ಷಗಳಿಂದ ಇತ್ತು. ಈ ಹಿಂದೆ ಬೇವೂರ ಗ್ರಾಮಸ್ಥರಿಗೆ ಮಾತು ಕೊಟ್ಟಂತೆ ಗ್ರಾಮಸ್ಥರ ಬೇಡಿಕೆ ಈಡೇರಿಸುವ ಬಗ್ಗೆ ಮುಖ್ಯಮಂತ್ರಿಗಳಿಗೆ ಕೇಳಿದ್ದೆ. ಬೇವೂರಿನ 11 ಹಳ್ಳಿಗಳು ಯಲಬುರ್ಗಾದಲ್ಲಿಯೇ ಉಳಿದಿದ್ದರಿಂದ ಇವರೆಲ್ಲರೂ ಯಲಬುರ್ಗಾ ಹೋಬಳಿಗೆ ಹೋಗುವ ಪರಿಸ್ಥಿತಿ ಇದೆ. ಜನರಿಗೆ ಅನಾನುಕೂಲತೆ ಆಗುತ್ತಿದೆ ಎಂದು ಅರಿತು ಇಲ್ಲಿ ಹೋಬಳಿ ಸೇವಾ ಕೇಂದ್ರ ತೆರೆಯುವ ಅನಿವಾರ್ಯತೆ ಇದೆ ಎಂದು ಮನವರಿಕೆ ಮಾಡಿದಾಗ ಮುಖ್ಯಮಂತ್ರಿಗಳು ತಮ್ಮ ಒತ್ತಾಯದಂತೆ ಮಹತ್ವದ ಹೋಬಳಿ ಸೇವಾ ಕೇಂದ್ರದ ಆರಂಭಕ್ಕೆ ಅನುಮತಿ ನೀಡಿದ್ದರಿಂದ ಸೇವಾ ಕೇಂದ್ರವು ಕಾರ್ಯಾನುಷ್ಠಾನವಾಗುತ್ತಿರುವುದು ಸಂತಸ ತಂದಿದೆ ಎಂದರು.

ರಾಜ್ಯ ಸರ್ಕಾರಕ್ಕೆ ಯಾವುದೇ ರೀತಿಯ ಆರ್ಥಿಕ ಹೊರೆ ಇಲ್ಲದೇ ಒಂದು ಹೋಬಳಿ ಸೇವಾ ಕೇಂದ್ರ ಆರಂಭಿಸಿದ ಕೀರ್ತಿ ನಮಗೆ ಸಲುತ್ತದೆ. ಈ ಕೇಂದ್ರಕ್ಕೆ ಚಾಲನೆ ನೀಡಲು ಕಂದಾಯ ಸಚಿವರಾದ ಕೃಷ್ಣ ಭೈರೇಗೌಡ ಅವರು ಕೊಪ್ಪಳ ಜಿಲ್ಲೆಗೆ ಆಗಮಿಸಿದ್ದು ವಿಶೇಷ ಸಂಗತಿಯಾಗಿದೆ. ಕೃಷ್ಣ ಭೈರೇಗೌಡ ಅವರು ಉತ್ತಮ ವಿಚಾರವಂತರು; ಉತ್ತಮ ಆಡಳಿತಗಾರರು. ಬಹುಮುಖ್ಯವಾಗಿ ಅತ್ಯಂತ ಸರಳವಾಗಿರುವವರು. ಅವರ ತಂದೆ ಆರು ಬಾರಿ ಶಾಸಕರಾಗಿದ್ದರು. 1985 ರಿಂದ 1999ರವರೆಗೆ ಅವರ ತಂದೆಯವರೊಂದಿಗೆ ಕೆಲವು ಕಾಲ ಶಾಸಕನಾಗಿ ಕೆಲಸ ಮಾಡಿದ ಹೆಮ್ಮೆ ನನ್ನದು. ಸಮಯಕ್ಕೆ ಅತ್ಯಂತ ಮಹತ್ವ ನೀಡುವ ಕೃಷ್ಣ ಭೈರೇಗೌಡ ಅವರು ಕಂದಾಯ ಇಲಾಖೆಯಲ್ಲಿ ಬೇರೆ ಬೇರೆ ಬದಲಾವಣೆ ಮಾಡಿ ಒಂದು ಶಿಸ್ತನ್ನು ತರುತ್ತಿದ್ದಾರೆ. ಕೃಷ್ಣ ಭೈರೇಗೌಡ ಅವರ ಕಾರ್ಯವೈಖರಿ, ಅವರು ಆಡಳಿತ ನಡೆಸುವ ರೀತಿಯು ಭಿನ್ನತೆಯಿಂದ ಕೂಡಿದೆ ಎಂಬುದಕ್ಕೆ ಕಂದಾಯ ಇಲಾಖೆಯಲ್ಲಿ ಆಗಿರುವ ಬದಲಾವಣೆಗಳೇ ಸಾಕ್ಷಿಯಾಗಿವೆ ಎಂದು ರಾಯರೆಡ್ಡಿ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ.ಕಡಿ ಅವರು ಪ್ರಾಸ್ತಾವಿಕ ಮಾತನಾಡಿದರು. ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಅವರು ಸ್ವಾಗತಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ರತ್ನಂ ಪಾಂಡೆಯ, ಭೂಮಾಪನ ಕಂದಾಯ ವ್ಯವಸ್ಥೆಯ ಮತ್ತು ಭೂ ದಾಖಲೆಗಳ ಇಲಾಖೆಯ ಆಯುಕ್ತರಾದ ಜೆ. ಮಂಜುನಾಥ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಭೂ ದಾಖಲೆ ಇಲಾಖೆಯ ಜಂಟಿ ನಿರ್ದೇಶಕರಾದ ಈ ಪ್ರಕಾಶ, ಉಪ ನಿರ್ದೇಶಕರಾದ ದೇವರಾಜ, ಬೇವೂರ ಗ್ರಾಮ ಪಂಚಾಯತ್ ಅಧ್ಯಕ್ಷೆ ಅಂದಮ್ಮ ಗವಿಸಿದ್ದಪ್ಪ ಬಳಿಗಾರ ಸೇರಿದಂತೆ ಇತರರು ಉಪಸ್ಥಿತರಿದ್ದರು. ತಹಸೀಲ್ದಾರರು, ತಾಪಂ ಕಾರ್ಯನಿರ್ವಹಣಾಧಿಕಾರಿಗಳು ಸೇರಿದಂತೆ ಕಂದಾಯ ಇಲಾಖೆಯ ವಿವಿಧ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

## ಕವಿ ಮನಸು

### ಹೇಳಿದೀರಾ ಅಮ್ಮನಿಗೆ ಒಂದಾದರೂ ಥ್ಯಾಂಕ್ಸ್



ಅಮ್ಮನು ಮಾಡುವ ತಾಲಿಪಟ್ಟು
ತಿಂದರೆ ಅದರ ರುಚಿ ದುಪ್ಪಟ್ಟು
ಒಲೆ ಮೇಲೆ ಹಂಚನು ಇಟ್ಟು
ಸುಟ್ಟಳು ಅಮ್ಮ ರುಚಿ ತಾಲಿಪಟ್ಟು

ಹಾಕಿ ಕರಿಬೇವು ಕೊತಂಬರಿ ಸೊಪ್ಪು
ರುಚಿಗಂತ ಹಾಕಿದಳು ಸ್ವಲ್ಪ ಹಳ್ಳುಪ್ಪು
ಅಕ್ಕಿ ಹಿಟ್ಟು ಗೋಧಿ ಹಿಟ್ಟು ಕಡಲೆ ಹಿಟ್ಟು
ಸೇರಿಸಿ ನೀರಲ್ಲಿ ನೆನಸಿ ಚೆನ್ನಾಗಿ
ನಾದಿಬಿಟ್ಟು

ಈರುಳ್ಳಿ ಚೂರ್ಮಾಡಿ ಬೆಳ್ಳುಳ್ಳಿ ಬಿಡಿಸಿದಳು
ಹಸಿ ಕೊಬ್ಬರಿ, ಹಸಿರು ಮೆಣಸಿನಕಾಯಿ
ಅರಿಶಿಣವ ಸೇರಿಸಿ ಚೆನ್ನಾಗಿ ತುರಿದಳು
ನಾದಿದ ಹಿಟ್ಟಲ್ಲಿ ಬೆರೆಸಿ ತುಂಡರಿಸಿದಳು

ನೆನಸಿದ ಹಿಟ್ಟಿಗೆ ಕೈಯಿಂದ ತಟ್ಟಿದಳು
ಚಂದಿರನ ಆಕಾರಕೆ ತಂದುಬಿಟ್ಟಳು
ಕರಿದಾದ ಹಂಚಿಗೆ ಅಗ್ನಿದೇವನ ಸ್ಪರ್ಶ
ತುಸು ಎಣ್ಣೆ ತಾಲೀಪಟ್ಟು ಬಾಯಿಗೆ ಹರ್ಷ

ಅಮ್ಮನ ಕರಗಳು ಅಮೃತದ ಸಮಾನ
ಬಯಸಲಿಲ್ಲ ಆಕೆ ಯಾರಿಂದಲೂ ಸನ್ಮಾನ
ಅಮ್ಮ ಮಾಡಿದಳು ಮನೆಯಲ್ಲಿ
ಉಚಿತವಾಗಿ
ಶುಚಿ ರುಚಿಯೊಡನೆ ಮಮತೆಯ
ತಾಲೀಪಟ್ಟು

ರೆಸ್ಟೋರೆಂಟಗೆ ಹೋದರೆ ಕೊಡುತೀರಾ
ಬಿಲ್ಲು ಕೊಟ್ಟವಗೆ ಕೈ ತುಂಬಾ ಟಿಪ್ಸ್
ಅಮ್ಮನ ಕೈ ರುಚಿ ತಿಂದವರು ಹೇಳಿದಿರಾ
ಅವಳಿಗೆ ಎಂದಾದರು ಒಂದೇ ಒಂದು
ಥ್ಯಾಂಕ್ಸ್

– ಕೆ ಎಂ ಬಸವರಾಜ
ನಿವೃತ್ತ ಇಂಜನೀರ್, ಹೊಸಪೇಟೆ

## ತುಂಗಭದ್ರಾ ನೀರಿನ ಮಟ್ಟ



| ಮಂಗಳವಾರ : 26-12-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1589.42 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 103 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.556 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1626.03 ಅಡಿ |
| ಒಳ ಹರಿವು | 577 ಕ್ಯುಸೆಕ್ |
| ಹೊರ ಹರಿವು | 9070 ಕ್ಯುಸೆಕ್ |
| ಸಾಮರ್ಥ್ಯ | 79.900 ಟಿಎಂಸಿ |

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಇನ್ಮುಂದೆ ಇ-ಫೈಲಿಂಗ್ ಕಡ್ಡಾಯ

**ಮೊದಲ ಪುಟದಿಂದ**

ಕುಡಿಯುವ ನೀರು–ಮೇವಿನ ಬಗ್ಗೆ ಎಚ್ಚೆತ್ತುಕೊಳ್ಳಿ:ವಿಜಯನಗರ ಜಿಲ್ಲೆಯಲ್ಲಿ ಎಲ್ಲಿಯಾದರೂ ಕುಡಿಯುವ ನೀರಿನ ಸಮಸ್ಯೆ ಉಂಟಾದರೆ, ಖಾಸಗಿ ಟ್ಯಾಂಕರ್ ಮೂಲಕ ನೀರು ಪೂರೈಸಬೇಕು. ಮುಂಜಾಗ್ರತಾ ಕ್ರಮವಾಗಿ ಈಗಲೇ ಜಿಲ್ಲೆಯಲ್ಲಿ 272 ಟ್ಯಾಂಕರ್‌ಗಳಿಗೆ ಟೆಂಡರ್ ಮಾಡಿರುವುದು ನಿಜಕ್ಕೂ ಉತ್ತಮ ಬೆಳವಣಿಗೆ ಎಂದು ಪ್ರಶಂಸಿದಅವರು, ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಟ್ಯಾಂಕರ್ ಒಂದೇ ಪರಿಹಾರವಲ್ಲ. ಬದಲಿಗೆ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆದು ನೀರಿನ ಸಮಸ್ಯೆ ಎಲ್ಲೇ ಕಂಡು ಬಂದರೂ 24 ಗಂಟೆಯ ಒಳಗಾಗಿ ನೀರು ಪೂರೈಸುವಂತಿರಬೇಕು. ಟ್ಯಾಂಕರ್ ಬಾಡಿಗೆಯನ್ನು 15 ದಿನಗಳಲ್ಲಿ ಬಿಲ್ ಪಾವತಿಗೆ ಕ್ರಮ ವಹಿಸಬೇಕೆಂದರು.

ಬಗರ್ ಹುಕುಂ ಅರ್ಜಿಗಳ ಶೀಘ್ರ ವಿಲೇಗೆ ಸೂಚನೆ:ವಿಲೇವಾರಿಯಾಗದ ಬಗರ್ ಹುಕುಂ ಅರ್ಜಿಗಳ ಬಗ್ಗೆ ಗಮನ ಸೆಳೆದ ಸಚಿವರು, ನಮೂನೆ 50, 53, 57ಕ್ಕೆ ಸಂಬಂಧಿಸಿದಂತೆ ಅಕ್ರಮ–ಸಕ್ರಮಗೊಳಿಸಿ ಸಾಗುವಳಿ ಚೀಟಿ ನೀಡಲು ಕೋರಿ ಜಿಲ್ಲೆಯಲ್ಲಿ 26,365 ಅರ್ಜಿಗಳು ಬಾಕಿ ಇವೆ. ನಿಜವಾದ ಸಾಗುವಳಿದಾರರಿಗೆ ಭೂಮಿ ನೀಡುವ ಸಲುವಾಗಿ ಬಗರ್ ಹುಕುಂ ಆ್ಯಪ್ ಅನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಅಧಿಕಾರಿಗಳು ಅರ್ಜಿದಾರರ ನಿರ್ದಿಷ್ಟ ಪ್ರದೇಶಕ್ಕೆ ತೆರಳಿ ಆ್ಯಪ್ ಮೂಲಕ 'ಜಿಯೋ ಫೆನ್ಸಿಂಗ್' ಮಾಡಬೇಕು. ಆ ಮೂಲಕ ಸ್ಯಾಟಲೈಟ್ ಇಮೇಜ್ ಪಡೆದು ಕೃಷಿ ಚಟುವಟಿಕೆ ನಡೆಯುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕು. ಆನಂತರ ಭೂ ಮಂಜೂರಾತಿ ಸೇರಿ 4.38 ಎಕರೆ ಜಮೀನಿಗಿಂತ ಹೆಚ್ಚಾಗಬಾರದು ಮತ್ತು ಅರ್ಜಿದಾರರಿಗೆ ಬೇರೆಲ್ಲೂ ಕೃಷಿ ಭೂಮಿ ಇಲ್ಲ ಎಂಬ ಕುರಿತು ಮಾಹಿತಿ ಖಚಿತಪಡಿಸಿಕೊಂಡು ಭೂ ಮಂಜೂರು ಮಾಡಬೇಕು. ಈ ಪ್ರಕ್ರಿಯೆ ಕನಿಷ್ಠ ಪ್ರತಿ ವಾರಕ್ಕೊಂದು ಗ್ರಾಮಗಳಲ್ಲಿ ಈ ಕೆಲಸ ಆಗಬೇಕು. ಸಾಗುವಳಿ ಚೀಟಿ ಹಾಗೂ ಹಣ ಪಾವತಿ ಎರಡೂ ಡಿಜಿಟಲ್ ರೂಪದಲ್ಲಿ ಇರಬೇಕು, ತಹಶೀಲ್ದಾರರೇ ಕ್ರಯ ಮಾಡಿಕೊಟ್ಟು ರೈತರಿಗೆ ತುಸು ನೆಮ್ಮದಿ ನೀಡಿ ಎಂದು ಅವರು ಎಚ್ಚರಿಸಿದರು.

ಅಲ್ಲದೆ, ಬಗರ್ ಹುಕುಂ ಅರ್ಜಿ ವಿಲೇವಾರಿ ಸಂದರ್ಭದಲ್ಲಿ ಅಧಿಕಾರಿಗಳು ಯಾವುದೇ ಪ್ರಭಾವಿಗಳ ಪಟ್ಟಭದ್ರ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ವರ್ತಿಸಬಾರದು, ಬದಲಾಗಿ ಬಡ ಜನರಿಗೆ ಮತ್ತು ಅರ್ಹರಿಗೆ ನ್ಯಾಯ ಒದಗಿಸಲು ಬದ್ಧರಾಗಿರಬೇಕು. ನಿಜಕ್ಕೂ ಉಳುಮೆಯಲ್ಲಿ ತೊಡಗಿರುವ ರೈತರಿಗೆ ಮಾತ್ರ ಸಾಗುವಳಿ ಚೀಟಿ ನೀಡಬೇಕು ಎಂದು ಅವರುಭೂ ಮಂಜೂರಾತಿ ಎಲ್ಲಾ ಪ್ರಕ್ರಿಯೆಗಳು ಡಿಜಿಟಲೀಕರಣ ರೂಪದಲ್ಲಿರಲಿದೆ ಎಂದರು.

ಕಂದಾಯ ಗ್ರಾಮಗಳ ಘೋಷಣೆಗೆ ಗಡುವು: ಕಂದಾಯ ಗ್ರಾಮಗಳ ಘೋಷಣೆ ವಿಚಾರದಲ್ಲಿ ವಿಜಯನಗರದಲ್ಲಿ 115 ಗ್ರಾಮಗಳು ಅಂತಿಮ ಘೋಷಣೆಗೆ ಬಾಕಿ ಇದ್ದು, 48 ಗ್ರಾಮಗಳಿಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಅಲ್ಲದೆ, 203 ಗ್ರಾಮಗಳನ್ನು ದಾಖಲೆ ರಹಿತ ಜನವಸತಿ ಪ್ರದೇಶ ಎಂದು ಗುರುತಿಸಲಾಗಿದ್ದು, ಗ್ರಾಮದಿಂದ 1 ಕಿ.ಮೀ ದೂರವಿರುವ ಮತ್ತು 50 ಕ್ಕೂ ಹೆಚ್ಚು ಕುಟುಂಬ ವಸತಿ ಇರುವ ಗ್ರಾಮಗಳನ್ನು ಕಂದಾಯ ಗ್ರಾಮಗಳ ಪಟ್ಟಿಗೆ ಸೇರಿಸಲು ಅವಕಾಶವಿದೆ. ಕಂದಾಯ ಇಲಾಖೆಗೆ ಸೇರದ ಕಾರಣ ಕಂದಾಯೇತರ ಜನವಸತಿ ನಿವಾಸಿಗಳು ಅಭಿವೃದ್ಧಿ ಯೋಜನೆಗಳಿಂದ ವಂಚಿತರಾಗುತ್ತಿದ್ದಾರೆ. ಇದೇ ಕಾರಣಕ್ಕೆ ಕರ್ನಾಟಕ ಭೂ ಕಂದಾಯ ಕಾಯಿದೆಗೆ ತಿದ್ದುಪಡಿ ತಂದು ತಾಂಡ–ಗೊಲ್ಲರಹಟ್ಟಿ ಸೇರಿದಂತೆ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮ ಎಂದು ಘೋಷಿಸಲು ಅನುವುಮಾಡಿಕೊಡಲಾಗಿತ್ತು.

ಇದು ಬಡವರ ಕೆಲಸ. ಅಧಿಕಾರಿಗಳು ಮಾನವೀಯತೆಯಿಂದ ಕಾರ್ಯನಿರ್ವಹಿಸಬೇಕು. ಹೀಗಾಗಿ ಆದ್ಯತೆಯ ಮೇಲೆ ಜನವಸತಿ ಗ್ರಾಮಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಲು ಪಟ್ಟಿ ಸಿದ್ದಪಡಿಸಿ, ಅನುಮೋದನೆ ಪಡೆದು ನಿವಾಸಿಗಳಿಗೆ ಹಕ್ಕುಪತ್ರ ನೀಡಲು ಸೂಚನೆ ನೀಡಿದರು.

ಒತ್ತುವರಿ ತೆರವುಗೊಳಿಸಿ ಸರ್ಕಾರಿ ಜಮೀನು ಉಳಿಸಲು ಕರೆ: ಸಭೆಯಲ್ಲಿ ಸರ್ಕಾರಿ ಭೂ ಒತ್ತುವರಿ ತೆರವಿನ ಬಗ್ಗೆಯೂ ಗಮನ ಸೆಳೆದ ಸಚಿವರುಸರ್ಕಾರಿ ಭೂ ಒತ್ತುವರಿಯನ್ನು ತೆರವುಗೊಳಿಸಲು ಸಿ.ಎಂ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಆದರೂ, ಅಧಿಕಾರಿಗಳು ಈ ಬಗ್ಗೆ ಕ್ರಮ ಜರುಗಿಸದಿರಲು ಕಾರಣವೇನು? ಎಂದು ಅಸಮಾಧಾನ ಹೊರಹಾಕಿದರು.

ಒತ್ತುವರಿಯಾದ ಸರ್ಕಾರಿ ಆಸ್ತಿಯನ್ನು ಟ್ಯಾಗ್ ಮಾಡಿ ಅಧಿಕಾರಿಗಳು ಮೂರು ತಿಂಗಳಿಗೊಮ್ಮೆ ಸರ್ಕಾರಿ ಆಸ್ತಿಗಳ ಸುತ್ತ ಪೊಲೀಸರ ರೀತಿ ಬೀಟ್ ಹಾಕುವ ಪದ್ಧತಿ ಆರಂಭಿಸಬೇಕು ಎಂದರು.ಅಲ್ಲದೆ, ಇನ್ನಾದರೂ ಅಧಿಕಾರಿಗಳು ವಾರದಲ್ಲಿ ಒಂದು ದಿನ ಭೂ ಒತ್ತುವರಿ ತೆರವು ಕಾರ್ಯಾಚರಣೆಗೆ ಮುಂದಾಗಬೇಕು ಎಂದರು.

ಸಭೆಯಲ್ಲಿ ಶಾಸಕರಾದ ಹೆಚ್.ಆರ್.ಗವಿಯಪ್ಪ, ಲತಾ ಮಲ್ಲಿಕಾರ್ಜುನ್,ಕೃಷ್ಣನಾಯಕ್,ಡಾ.ಎನ್.ಟಿ.ಶ್ರೀನಿವಾಸ್, ಕಂದಾಯ ಇಲಾಖೆ ಆಯುಕ್ತರಾದ ಪಿ.ಸುನೀಲ್ ಕುಮಾರ್, ಭೂ ಮಾಪನ ಇಲಾಖೆ ಆಯುಕ್ತರಾದ ಮಂಜುನಾಥ್, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ., ಅಪರ ಜಿಲ್ಲಾಧಿಕಾರಿ ಅನುರಾಧ ಜಿ., ಉಪವಿಭಾಗಾಧಿಕಾರಿ ಮಹದ್‌ಅಲಿ ಅಕ್ರಮ ಷಾಹ ಸೇರಿದಂತೆ ತಹಶೀಲ್ದಾರರು ಉಪಸ್ಥಿತರಿದ್ದರು.

# ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣೆ ಸಂಸ್ಥೆಯಿಂದ ರಾಷ್ಟ್ರೀಯ ರೈತ ದಿನ ಆಚರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣೆ ಸಂಸ್ಥೆ(ಐಸಿಎಆರ್)ಯ ಬಳ್ಳಾರಿ ಸಂಶೋಧನಾ ಕೇಂದ್ರ ವತಿಯಿಂದ ಸಂಡೂರು ತಾಲೂಕಿನ ಮತ್ತಜನಹಳ್ಳಿ ಗ್ರಾಮದಲ್ಲಿ ರೈತ ದಿನಾಚರಣೆ ಆಚರಿಸಲಾಯಿತು.

ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣೆ ಸಂಸ್ಥೆಯ ಬಳ್ಳಾರಿ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ.ಬಿ.ಕೆ.ರಾವ್ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಮಣ್ಣಿನ ಆರೋಗ್ಯವನ್ನು ಸುಧಾರಿಸಲು ನೈಸರ್ಗಿಕ ಕೃಷಿ ತಂತ್ರಗಳಂತಹ ಪ್ರಕೃತಿ ಆಧಾರಿತ ಪರಿಹಾರಗಳ ಆಳವಡಿಕೆಯಮಹತ್ವದಅರಿವುಮೂಡಿಸಿಕೊಳ್ಳಬೇಕು. ರೈತರು ಕೃಷಿ ಭೂಮಿಯಲ್ಲಿ ಮಣ್ಣು ಮತ್ತು ನೀರಿನ ಸಂರಕ್ಷಣಾ ತಂತ್ರಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬುಡಕಟ್ಟು ಉಪ ಯೋಜನೆ ಮತ್ತು ಪರಿಶಿಷ್ಟ ಜಾತಿ ಉಪ ಯೋಜನೆಗಳಲ್ಲಿ ಅನುಷ್ಠಾನಗೊಳಿಸಲಾದ ಮಣ್ಣು ಮತ್ತು ಜಲ ಸಂರಕ್ಷಣೆಯ ತಂತ್ರಗಳನ್ನು ಅಳವಡಿಸಿಕೊಂಡಿದ್ದ ಮತ್ತಜ್ಜನಹಳ್ಳಿ ಮತ್ತು ಚಿಲುಮೆಹಳ್ಳಿ ತಾಂಡ ಗ್ರಾಮದ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ರೈತರಿಗೆ ಸುಧಾರಿತ ಕೃಷಿ ಪದ್ಧತಿಗಳ ಬಗ್ಗೆ ಅರಿವು ಮೂಡಿಸಲಾಯಿತು ಮತ್ತು ಕೃಷಿಯಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ನೀಡುವ ಸಂವಾದ ಸಭೆಯನ್ನು ನಡೆಸಲಾಯಿತು.

ಬುಡಕಟ್ಟು ಉಪ ಯೋಜನೆ ಮತ್ತು ಪರಿಶಿಷ್ಟ ಜಾತಿ ಉಪ ಯೋಜನೆಯಡಿ ನಡೆಯುತ್ತಿರುವ ಚಟುವಟಿಕೆಗಳ ಕುರಿತು ರೈತರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ವಿಜ್ಞಾನಿ ಡಾ.ಬಿ.ಎಸ್.ನಾಯ್ಕ, ಡಾ.ರಮೇಶ ಎಂ.ಎನ್, ಡಾ.ಪ್ರಭಾವತಿ ಎಂ, ಡಾ.ರವಿ ದೂಪದಲ್, ರವಿ.ಕೆ.ಎನ್ ಮತ್ತು ಡಾ.ಅನುಷಾ.ಎಂ.ಎನ್ ಸೇರಿದಂತೆ ರೈತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಜಿಲ್ಲಾ ಮಟ್ಟದ ಕ್ರೀಡಾ ಶಾಲೆ, ವಸತಿ ನಿಲಯಕ್ಕೆ ಆಯ್ಕೆ ಪ್ರಕ್ರಿಯೆ ಡಿ.29ರಂದು

**ಹಂಪಿ ಟೈಮ್ಸ್ ಬಳ್ಳಾರಿ**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಜಿಲ್ಲಾ ಮಟ್ಟದ ಕ್ರೀಡಾ ಶಾಲೆ ಹಾಗೂ ವಸತಿ ನಿಲಯಕ್ಕೆ 2024–25ನೇ ಸಾಲಿನ ಪ್ರತಿಭಾವಂತ ಬಾಲಕ ಮತ್ತು ಬಾಲಕಿ ಕ್ರೀಡಾಪಟುಗಳ ಪ್ರಥಮ ಹಂತದ ಆಯ್ಕೆ ಪ್ರಕ್ರಿಯೆಯು ಡಿ.29ರಂದು ಬೆಳಿಗ್ಗೆ 11 ಗಂಟೆಗೆ ನಗರದ ನಲ್ಲಚೇರುವು ಪ್ರದೇಶದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಸಲಾಗುವುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ.ಗ್ರೇಸಿ ಅವರು ತಿಳಿಸಿದ್ದಾರೆ.

ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳ ದೈಹಿಕ ಪರೀಕ್ಷೆಯನ್ನು ನಡೆಸಲಾಗುವುದು. ಭಾಗವಹಿಸುವ ಕ್ರೀಡಾ ಪಟುಗಳು 4ನೇ ತರಗತಿ ಪಾಸ್ ಆಗಿ 5ನೇ ತರಗತಿಗೆ ಪ್ರವೇಶ ಪಡೆಯುವವರಾಗಿರಬೇಕು (ಹಾಕಿ ಮತ್ತು ಅಥ್ಲೆಟಿಕ್ಸ್ ಬಾಲಕರಿಗೆ ಮಾತ್ರ). 11 ವರ್ಷದೊಳಗೆ (ಜನ್ಮ ದಿನಾಂಕ 01.06.2013 ನಂತರ ಜನಿಸಿರಬೇಕು). 7ನೇ ತರಗತಿ ಪಾಸ್ ಆಗಿ 8ನೇ ತರಗತಿಗೆ ಪ್ರವೇಶ ಪಡೆದಿರಬೇಕು (14 ವರ್ಷದೊಳಗಿನವರು ಜನ್ಮ ದಿನಾಂಕ 01.06.2010 ನಂತರ ಜನಿಸಿರಬೇಕು). ಅಥ್ಲೆಟಿಕ್ಸ್, ವಾಲಿಬಾಲ್, ಬಾಸ್ಕೆಟ್‌ಬಾಲ್, ಜೂಡೊ, ಕುಸ್ತಿ, ಈಜು, ಜಿಮ್‌ನಸ್ಟಿಕ್, ಹಾಕಿ ಹಾಗೂ ಪುಟ್ಬಾಲ್ ಪುರುಷರಿಗೆ ಮಾತ್ರ) ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳು ವಯಸ್ಸಿನ ಪ್ರಮಾಣ ಪತ್ರ, ಆಧಾರ್ ಕಾರ್ಡ್‌ದೊಂದಿಗೆ ಹಾಜರಾಗುವುದು. ಯಾವುದೇ ಪ್ರಯಾಣ ಬತ್ಯೆ ಮತ್ತು ದಿನಬತ್ಯೆ ನೀಡಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಹಾಗೂ ಮೊ.972552385 ಅಥವಾ ಹಾಕಿ ತರಬೇತುದಾರರಾದ ಎಂ.ಜಾಕೀರ್ ಅವರ ಮೊ.9036335986, ಅಥ್ಲೆಟಿಕ್ ತರಬೇತುದಾರಾದ ರೋಹಿಣಿ ಪರ್ವತೀಕರ್ ಮೊ.9448830108, ಬ್ಯಾಡ್ಮಿಂಟನ್ ತರಬೇತುದಾರರಾದ ಜಿ.ರವಿ ಮೊ.9739852460 ಹಾಗೂ ಪುಟ್ಬಾಲ್ ತರಬೇತುದಾರರಾದ ಮಸುದ್ ಮೊ.9886688858 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಕ್ರೋ ನ್ಯೂಸ್

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಚಟುವಟಿಕೆಯಿಂದ ಕಲಿತರೆ ಗಣಿತ ಸುಲಭ

## ಮುಖ್ಯೋಪಾಧ್ಯಾಯ ಜಿ. ಪಕ್ಕೀರಪ್ಪ ಹೇಳಿಕೆ | ಕೊಟ್ಟೂರು ತಾಲೂಕಿನ ನಿಂಬಳಗೇರಿ ಸರ್ಕಾರಿ ಪ್ರೌಢಶಾಲೆಯಲ್ಲಿ ಗಣಿತಜ್ಞ ರಾಮಾನುಜನ್ ಜನ್ಮದಿನಾಚರಣೆ

■ **ಹಂಪಿ ಟೈಮ್ಸ್ ಕೊಟ್ಟೂರು**

ಗಣಿತ ಕಬ್ಬಿಣದ ಕಡಲೆ ಅಲ್ಲ, ಸುಲಭ ಗಣಿತ ಕಲಿಕೆಗೆ, ಚಟುವಟಿಕೆಗಳು ಪೂರಕವಾಗಿವೆ ಜೊತೆಗೆ ಗಣಿತದೆಡೆಗೆ ಆಸಕ್ತಿ ಹೊಂದಲು ಕಾರಣವಾಗಿದೆ ಎಂದು ಶಾಲೆಯ ಮುಖ್ಯೋಪಾಧ್ಯಾಯರು ಜಿ. ಪಕ್ಕೀರಪ್ಪ ಹೇಳಿದರು.

ತಾಲೂಕಿನ ನಿಂಬಳಗೇರಿ ಗ್ರಾಮದ ಶ್ರೀ ಬಿ.ಕೆ.ವಿ ಸರ್ಕಾರಿ ಪ್ರೌಢಶಾಲೆಯಲ್ಲಿ ದೇಶ ಕಂಡ ಶ್ರೇಷ್ಠ ಗಣಿತಜ್ಞ ಶ್ರೀನಿವಾಸ್ ರಾಮಾನುಜನ್ ಅವರ ಜನ್ಮ ದಿನಾಚರಣೆಯ ಪ್ರಯುಕ್ತ ಏರ್ಪಡಿಸಿದ್ದ ಗಣಿತ ದಿನಾಚರಣೆ ಕಾರ್ಯಕ್ರಮದಲ್ಲಿ, ಖ್ಯಾತ ಗಣಿತಜ್ಞ ಶ್ರೀನಿವಾಸ್ ರಾಮಾನುಜನ್ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅಧ್ಯಕ್ಷತೆ ನುಡಿಗಳನ್ನಾಡಿದರು.

ಮಾಯಾ ಚೌಕದ ರಚನೆಯ ಮೂಲಕ ಕಾರ್ಯಕ್ರಮದ ಉದ್ಘಾಟನೆಯನ್ನು ಅತಿಥಿಗಳು ನೆರವೇರಿಸಿದರು. ಗಣಿತ ಶಿಕ್ಷಕರಾದ ಶರ್ಮತ್ ಕಣದ ಮನಿಯವರು ಗಣಿತ ದಿನಾಚರಣೆಯ ಮಹತ್ವ ಮತ್ತು ಗಣಿತಜ್ಞ ಶ್ರೀನಿವಾಸ್ ರಾಮಾನುಜನ್ ಬಗ್ಗೆ ತಿಳಿಸಿದರು.

ಶಾಲೆಯ ವಿದ್ಯಾರ್ಥಿಗಳಿಗೆ ಅನೇಕ ಚಟುವಟಿಕೆಗಳನ್ನು ಮತ್ತು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಗಣಿತ, ರಂಗೋಲಿ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಗಣಿತಜ್ಞರಾದ ಶ್ರೀನಿವಾಸ್ ರಾಮಾನುಜನ್ ಆರ್ಯಭಟ ಪೈಥಾಗೊರಸ್ ಯೂಕ್ಲಿಡ್, ಇನ್ನಿತರ ಗಣಿತದ ಆಕೃತಿಗಳನ್ನು ರಂಗೋಲಿಯಲ್ಲಿ ಚಿತ್ರಿಸಿ ಸೃಜನಶೀಲತೆ ತೋರಿದರು.



ವಿದ್ಯಾರ್ಥಿಗಳು ಗಣಿತ ರಸಪ್ರಶ್ನೆಯಲ್ಲಿ ಗಣಿತ ಪದಬಂಧ, ಗಣಿತ ಫಜಲ್. ದಿನ ನಿತ್ಯ ಜೀವನದಲ್ಲಿ ಗಣಿತ. ಮುಂತಾದ ಪ್ರಶ್ನೆಗಳಿಗೆ ಉತ್ತರಿಸಿದರು. ಹಾಗೂ ವಿದ್ಯಾರ್ಥಿಗಳು ಮತ್ತು ಗಣಿತ ವಸ್ತು ಪ್ರದರ್ಶನದಲ್ಲಿ 50 ಗಣಿತದ ವಿವಿಧ ಮಾದರಿಗಳಾದ ತ್ರಿಕೋನ ಮಿತಿ, ಪಾರ್ಕ್, ಎಟಿಎಂ ಮೆಷೀನ್, ವೃತ್ತ ದ ಲೈಟಿಂಗ್, ಮಾದರಿಗಳು ಚಿತ್ರಿಸಿದರು.

ಸಂಭವನೀಯತೆಯತೆ ಗಣಿತ ಲೋಕ ವಿಧಗಳು ಘನಾಕೃತಿಗಳು ಇನ್ನಿತರ ಮಾದರಿಗಳನ್ನುವಿದ್ಯಾರ್ಥಿಗಳು ತಯಾರಿಸಿ ತಮ್ಮ ಜಾಣ್ಮೆಯನ್ನು ಅನಾವರಣಗೊಳಿಸಿ ಗಣಿತ ಕಬ್ಬಿಣ ದ ಕಡಲೆ ಅಲ್ಲ.ಸುಲಭ ಗಣಿತ ಕಲಿಕೆಗೆ. ಚಟುವಟಿಕೆಗಳು ಪೂರಕವಾದವುಗಳು ಎಂಬುದನ್ನು ತೋರಿಸಿಕೊಟ್ಟರು.

ಗಣಿತ ಶಿಕ್ಷಕರಾದ ಮಂಗಳ ಗೌರಿ, ರವಿ ಪ್ರಸಾದ್ ಮತ್ತು ಗುರುಬಸವರಾಜ್ ಅವರು ಕಾರ್ಯಕ್ರಮವನ್ನು ನಿರ್ವಹಿಸಿದರು, ಕಾರ್ಯಕ್ರಮದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಣೆ ಮಾಡಲಾಯಿತು. ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷರು ಎಮ್ ಜಿ ಪ್ರಕಾಶ ಗೌಡ ಮತ್ತು ಸದಸ್ಯರಾದ ವೀರಭದ್ರಪ್ಪ, ಸಿದ್ದಣ್ಣ ಪೋಷಕರು ಪಾಲ್ಗೊಂಡಿದ್ದರು.

ಹಿರಿಯ ಶಿಕ್ಷಕರಾದ ಎಮ್ ಬಿ ನಾಗರಾಜ್, ಎಸ್ ವಿದ್ಯಾರಣ್ಯ, ಹಾಗೂ ಶಿಕ್ಷಕರಾದ ಅಂಜಿನಮ್ಮ, ಬಿ.ಪತ್ರೇಶ, ಶಿವಪುತ್ರಗೌಡ, ಸಿದ್ದೇಶ, ಮಲ್ಲಪ್ಪ, ರೇವಣಸಿದ್ದಯ್ಯ ಉಪಸ್ಥಿತರಿದ್ದರು.

# ಗ್ರಾ.ಪಂ.ಕಾರ್ಯದರ್ಶಿಗಳ ವಿಜಯನಗರ ಜಿಲ್ಲಾ ಸಮಿತಿ ರಚನೆ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ:**

ಕರ್ನಾಟಕ ಗ್ರಾಮೀಣಾಭಿವೃಧಿ ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಗಳ ಗ್ರೇಡ್ 1 ಮತ್ತು 2 ಹಾಗೂ ದ್ವಿತೀಯ ಲೆಕ್ಕ ಸಹಾಯಕರ ಕಲ್ಯಾಣ ಕರ್ನಾಟಕ ವಿಭಾಗದ ವಿಜಯನಗರ ಜಿಲ್ಲಾ ಸಮಿತಿ ರಚನೆ ಮಾಡಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಪಟ್ಟಣದ ಈಶ್ವರ ದೇಗುಲದ ಆವರಣದಲ್ಲಿ ಬಳ್ಳಾರಿ ಜಿಲ್ಲಾ ಸಮಿತಿಯ ಜಿಲ್ಲಾಧ್ಯಕ್ಷ ಉದ್ದನಗೌಡರ ಅಧ್ಯಕ್ಷತೆಯಲ್ಲಿ ಸೋಮವಾರ ಸಂಜೆ ನಡೆದ ಸಭೆಯಲ್ಲಿ ವಿಜಯನಗರ ಜಿಲ್ಲಾ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆಮಾಡಲಾಯಿತು.

ವಿಜಯನಗರ ಜಿಲ್ಲಾ ಸಮಿತಿ: ಜಿ. ಎಸ್.ಪರಮೇಶ್(ಜಿಲ್ಲಾ ಗೌರವ ಅಧ್ಯಕ್ಷ), ಕೊಟ್ರೇಶ್ ಮಾಲವಿ(ಜಿಲ್ಲಾಧ್ಯಕ್ಷ), ಸರ್ದಾರ್ ಮಂಜುನಾಥ, (ಜಿಲ್ಲಾ ಪ್ರಧಾನ ಕಾರ್ಯದರ್ಶಿ), ಪವಿತ್ರ, ಗುರುಬಸವರಾಜ್, ಜಿ.ಹನುಮಂತಪ್ಪ (ಸಂಘಟನಾ ಕಾರ್ಯದರ್ಶಿಗಳು), ಆರ್.ಕನಕಪ್ಪ, ಎಸ್. ಕೋಟೆಪ್ಪ, ಬುಳ್ಳನಗೌಡ, ಯಲ್ಲಪ್ಪ, ತಿಪ್ಪನಾಯಕ, ವೈಶಾಲಿ, ಮಾರುತಿ (ಉಪಾಧ್ಯಕ್ಷರು), ಬಾಲಚಂದರ್, ವಿಜಯಲಕ್ಷ್ಮಿ, ಕೆ.ಕೊಟ್ರೇಶ್, ಶರಣಪ್ಪ, ನಾಗರತ್ನಮ್ಮ, ಈಶ್ವರಯ್ಯ, ಕೆ.ಎಂ. ಹಾಲಸ್ವಾಮಿ (ಸಹಕಾರ್ಯದರ್ಶಿಗಳು) ಹಾಗೂ ಎಚ್.ನಿಂಗಪ್ಪ (ಖಜಾಂಚಿ) ರನ್ನು ಆಯ್ಕೆ ಮಾಡಲಾಯಿತು.

ನೂತನವಾಗಿ ಆಯ್ಕೆಯಾದ ಜಿಲ್ಲಾಧ್ಯಕ್ಷ ಕೊಟ್ರೇಶ್ ಮಾಲವಿ ಮಾತನಾಡಿ, ಗ್ರಾ.ಪಂ. ಗಳಲ್ಲಿ ಕರ್ತವ್ಯ ನಿರ್ವಹಿಸುವ ಗ್ರಾ.ಪಂ. ಅಧಿಕಾರಿಗಳು ಎಸ್‌ಡಿಎ ನೌಕರರು ಸೇರಿದಂತೆ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಯಾವುದೇ ಸಂದರ್ಭದಲ್ಲೂ ಕರ್ತವ್ಯ ನಿರ್ವಹಿಸುವಾಗ ಕೆಲ ಅಡೆ ತಡೆಗಳು ಉಂಟಾಗುವ ಜೊತೆಗೆ ದಾಳಿಗಳು ಸಹ ನಡೆಯುತ್ತವೆ. ಯಾವುದೇ ರಕ್ಷಣೆ ಇಲ್ಲದಂತಾಗುತ್ತದೆ. ಆದ್ದರಿಂದ ವಿಜಯನಗರ ಜಿಲ್ಲಾಧ್ಯಕ್ಷರನ್ನಾಗಿ ನನ್ನನ್ನು ಆಯ್ಕೆ ಮಾಡಿದ ಈ ಸಂದರ್ಭದಲ್ಲಿ ನಾನು ಗ್ರಾ.ಪಂ.ಗಳ ನೌಕರರ ಕ್ಷೇಮಾಭಿವೃದ್ದಿಗೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.


# ಶ್ರೀ ಮಾರಿಕಾಂಬದೇವಿ ಕಾರ್ತಿಕೋತ್ಸವ

■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಭಕ್ತಿ, ಶಾಂತಿ ಹಾಗೂ ನೆಮ್ಮದಿಗಾಗಿ ಕಾರ್ತಿಕ ಮಾಸದಲ್ಲಿ ದೀಪ ಬೆಳಗಿಸುತ್ತಿರುವುದು ಅನೇಕ ವರ್ಷಗಳಿಂದಲೂ ನಡೆದುಕೊಂಡು ಬಂದಿದೆ. ಸ್ಥಳೀಯ ಯುವಕರು ಈ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ಸಂತೋಷದ ಸಂಗತಿಯಾಗಿದೆ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ರಂಗಕಲಾವಿದೆ ಡಾ. ಕೆ. ನಾಗರತ್ನಮ್ಮ ಹೇಳಿದರು.

ಇಲ್ಲಿನ 7ನೇ ವಾರ್ಡಿನಲ್ಲಿ ಇತ್ತೀಚಿಗೆ ನಡೆದ 26ನೇ ವರ್ಷದ ಶ್ರೀ ಮಾರಿಕಾಂಬದೇವಿ ಕಾರ್ತಿಕೋತ್ಸವ ಸಮಾರಂಭದಲ್ಲಿ ಮುಖ್ಯಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು. ಕಾರ್ತಿಕೋತ್ಸವ ಸಮಾರಂಭ ದಲ್ಲಿ ವಾರ್ಡಿನ ಜನರೆಲ್ಲರೂ ಪಾಲ್ಗೊಂಡು ಶ್ರದ್ದೆ ಮತ್ತು ಭಕ್ತಿಯಿಂದ ಆಚರಿಸಲಾಗುತ್ತಿದೆ. ಸ್ಥಳೀಯ ವಾರ್ಡಿನ ಅತ್ಯಂತ ಹಿರಿಯ ವಯೋವೃದ್ದರನ್ನು ಸಮಾರಂಭದಲ್ಲಿ ಕರೆದು ಅವರನ್ನು ಸನ್ಮಾನಿಸಿದರೆ ಹಿರಿಯರಿಗೆ ನಾವು ಗೌರವ ನೀಡಿದಂತಾಗುತ್ತದೆ. ಮುಂದಿನ ವರ್ಷದಿಂದ ಹಿರಿಯರನ್ನು ಕರೆದು ಗೌರವಿಸುವಂತೆ ಅವರು ಸಲಹೆ ನೀಡಿದರು.

ನಿವೃತ್ತ ಶಿಕ್ಷಕ ಕೆ. ನಾಗರಾಜ ಮಾತನಾಡಿ, 7ನೇ ವಾರ್ಡಿನಲ್ಲಿ ಅನೇಕ ವರ್ಷಗಳಿಂದ ಕೋಲಾಟ, ಭಜನೆ, ಬಯಲಾಟ, ನಾಟಕ ಸೇರಿದಂತೆ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅನೇಕ ವರ್ಷಗಳಿಂದಲೂ ನಡೆಸಿಕೊಂಡು ಬರಲಾಗುತ್ತಿದೆ. ಯುವಕರಿಗೆ ಕೋಲಾಟ, ಭಜನೆ ತರಬೇತಿ ನೀಡುವ ಮೂಲಕ ಸಾಂಸ್ಕೃತಿಕ ವಾತಾವರಣ ನಿರ್ಮಾಣ ಮಾಡುತ್ತಿರುವುದು ಸಂತೋಷದ ಸಂಗತಿಯಾಗಿದೆ. ಕಾರ್ತಿಕೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ಇದರೊಂದಿಗೆ ಕಾರ್ತಿಕೋತ್ಸವದಂದು ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರಿಂದ ದುಂದು ವೆಚ್ಚದ ಮದುವೆಗಳಿಗೆ ಕಡಿವಾಣ ಹಾಕಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಯುವಕರು ಮುಂದಾಗಬೇಕು ಎಂದು ಅವರು ಹೇಳಿದರು.



ಉಪನ್ಯಾಸಕ ಡಾ. ಈ. ಎರ್ರಿಸ್ವಾಮಿ ಸಭೆಯಲ್ಲಿ ಮಾತನಾಡಿದರು. ಸ್ಥಳೀಯ ಉದ್ಯಮಿ ವಸ್ತ್ರದ ಶಿವಶಂಕರಯ್ಯ ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀ ಮಾರಿಕಾಂಬದೇವಿ ಸಂಘದ ಅಧ್ಯಕ್ಷ ಎಚ್. ಗೋಪಾಲ ಸಮಾರಂಭದ ಅಧ್ಯಕ್ಷತೆವಹಿಸಿಕೊಂಡಿದ್ದರು.

ಲಲಿತಕಲಾ ರಂಗದ ಅಧ್ಯಕ್ಷ ಹುರುಕೊಳ್ಳಿ ಮಂಜುನಾಥ, ಶ್ರೀಮಾರಿಕಾಂಬದೇವಿ ಸಂಘದ ಮಾಜಿ ಅಧ್ಯಕ್ಷರಾದ ಎಂ. ಬಸವರಾಜ, ಬಿ. ನಾಗೇಂದ್ರ, ಸ್ಥಳೀಯ ಮುಖಂಡರಾದ ಕೆ. ರಾಮಚಂದ್ರಪ್ಪ, ಪೂಜಾರಿ ವೆಂಕಟಸೋಮಪ್ಪ, ಹಂಪಿನಕಟ್ಟಿ ಗೂಕಪ್ಪ, ಹ್ಯಾಟಿ ರಾಮಣ್ಣ ಸೇರಿದಂತೆ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಕಾರ್ತಿಕೋತ್ಸವದ ಅಂಗವಾಗಿ ಶ್ರೀಮಾರಿಕಾಂಬ ದೇವಿಗೆ ಅಭಿಷೇಕ ಸೇರಿದಂತೆ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಸುಮಂಗಲಿಯವರು ಸಕಲ ವಾದ್ಯಗಳೊಂದಿಗೆ ಗಂಗೆ ಪೂಜೆಗೆ ತೆರಳಿ, ಅಲ್ಲಿಂದ ಕುಂಬ ಮೆರವಣಿಗೆಯೊಂದಿಗೆ ಶ್ರೀಮಾರಿಕಾಂಬ ದೇವಸ್ಥಾನಕ್ಕೆ ಆಗಮಿಸಿತು. ನಂತರ ಶ್ರೀಮಾರಿಕಾಂಬದೇವಿಯ ಮುತ್ತಿನಹಾರ ಮತ್ತು ತುಂಬಿದ ಕಾಯಿ ಹರಾಜು ನಡೆಯಿತು. ರಾತ್ರಿ ಅನ್ನಸಂತರ್ಪಣೆ ನಡೆಯಿತು.

# ಡಿ.28 & 29ರಂದು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರ ಪ್ರವಾಸ

■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ್ ಕೋಸಂಬೆ ಅವರು ವಿಜಯನಗರ ಜಿಲ್ಲೆಯಲ್ಲಿ ಡಿ.28 ಮತ್ತು 29ರಂದು ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ಡಿ.28ರಂದು ಬೆಳಿಗ್ಗೆ 7ರಿಂದ ಸಂಜೆ 6 ಗಂಟೆಯವರೆಗೆ ಜಿಲ್ಲೆಯ ಅಂಗನವಾಡಿ ಕೇಂದ್ರಗಳು, ಮೊರಾರ್ಜಿ ದೇಸಾಯಿ ವಸತಿ ಶಾಲೆ, ದತ್ತು ಕೇಂದ್ರ, ಸರ್ಕಾರಿ ಶಾಲೆ, ಜಿಲ್ಲಾ ಆಸ್ಪತ್ರೆ ಮತ್ತು ಮಕ್ಕಳ ಪಾಲನಾ ಸಂಸ್ಥೆಗಳಿಗೆ ಭೇಟಿ ನೀಡಿ, ವಸತಿ ನಿಲಯದಲ್ಲಿ ವಾಸ್ತವ್ಯ ಹೂಡುವರು. ಡಿ.29ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1.30ರವರೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಮಕ್ಕಳ ರಕ್ಷಣಾ ವ್ಯವಸ್ಥೆ ಕುರಿತು ಭಾಗೀದಾರರೊಂದಿಗೆ ಸಮಾಲೋಚನಾ ಸಭೆ ನಡೆಸುವರು. ಬಳಿಕ ಮಧ್ಯಾಹ್ನ 3ಗಂಟೆಗೆ ಭಾಲ್ಕಿಗೆ ಪ್ರಯಾಣ ಬೆಳಸುವರು ಎಂದು ವಿಜಯನಗರ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುಭದ್ರಮ್ಮ ತಿಳಿಸಿದ್ದಾರೆ.

# ಆಯ್ಕೆ ಪಟ್ಟಿಗೆ ಆಕ್ಷೇಪಣೆ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಿಂದ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದ್ದು, ಆಕ್ಷೇಪಣೆಗೆ ಆಹ್ವಾನಿಸಲಾಗಿದೆ.

ವಿಜಯನಗರ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದ ಜಿಲ್ಲಾ ಲೆಕ್ಕ ಪತ್ರ ವ್ಯವಸ್ಥಾಪಕರು(ಎಫ್‌ಎಮ್‌ಜಿ) ಹುದ್ದೆಗೆ ಅರ್ಜಿ ಆಹ್ವಾನಿಸಿ, ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ. ಈ ಆಯ್ಕೆ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷಪಣೆಗಳಿದ್ದಲ್ಲಿ ಅಭ್ಯರ್ಥಿಗಳು ಜ.03ರ ಸಂಜೆ 5.30ರ ಒಳಗಾಗಿ ಕಚೇರಿಯ ಸಮಯದಲ್ಲಿ ಲಿಖಿತ ರೂಪದಲ್ಲಿ ಆಕ್ಷಪಣೆ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸಂಘದ ಉಪಾಧ್ಯಕ್ಷ ಡಾ. ಎಲ್.ಆರ್ ಶಂಕರ್ ನಾಯ್ಕ್ ತಿಳಿಸಿದ್ದಾರೆ.

# ಕನ್ನಡ ಸಾಹಿತ್ಯ ಪರಿಷತ್ತು: ಕಾವ, ಜಾಣ, ರತ್ನ ಪರೀಕ್ಷೆಗಳು ಜ.5ರಿಂದ

**ಹಂಪಿ ಟೈಮ್ಸ್ ಬಳ್ಳಾರಿ**

ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ 2023–24ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ, ರತ್ನ ಪರೀಕ್ಷೆಗಳನ್ನು ಜನವರಿ 5, 6 ಮತ್ತು 7 ರಂದು ರಾಜ್ಯದ 20 ಕೇಂದ್ರಗಳಲ್ಲಿ ಆಯೋಜಿಸಿದೆ.

ಪರೀಕ್ಷಾ ಪ್ರವೇಶ ಪತ್ರವನ್ನು ವಿದ್ಯಾರ್ಥಿಗಳಿಗೆ ಅಂಚೆ ಮೂಲಕ ಕಳುಹಿಸಲಾಗಿದೆ. ಡಿಸೆಂಬರ್ 22 ರ ನಂತರವೂ ಪ್ರವೇಶ ಪತ್ರ ತಲುಪದಿದ್ದಲ್ಲಿ ವಿದ್ಯಾರ್ಥಿಗಳು ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–18 ಇಲ್ಲಿ ವಿಚಾರಿಸಬಹುದು. ಪ್ರವೇಶ ಪತ್ರ ಮತ್ತು ಪರೀಕ್ಷಾ ಕೇಂದ್ರಗಳ ವಿಳಾಸವನ್ನು ಅಂತರ್ಜಾಲ ತಾಣ ತಿತಿತಿ.ಇಭಿಚಿಠಿಚಿ.ಟಿ ಮೂಲಕ ಸಹ ಪಡೆದುಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ.080 –26612991, 26623584, 26523867 ಹಾಗೂ ಮೊ.8618296186 ಸಂಪರ್ಕಿಸಬಹುದು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಡಾ.ಪದ್ಮಿನಿ ನಾಗರಾಜು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 4ನೇ ತ್ರೈಮಾಸಿಕ ಉಪವಿಭಾಗ ಮಟ್ಟದ ಜಾಗೃತಿ ಸಭೆ ಡಿ.27ರಂದು

■ **ಹಂಪಿ ಟೈಮ್ಸ್ ಬಳ್ಳಾರಿ**

ಮಾನ್ಯುವೆಲ್ ಸ್ಕ್ಯಾವೆಂಜರ್‌ಗಳ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರನ್ವಯ ನಾಲ್ಕನೇ ತ್ರೈಮಾಸಿಕ ಉಪವಿಭಾಗ ಮಟ್ಟದ ಜಾಗೃತಿ ಸಮಿತಿಯ ಸಭೆ ಡಿ.27ರಂದು ಬೆಳಿಗ್ಗೆ 11 ಗಂಟೆಗೆ ಸಹಾಯಕ ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ನಡೆಯಲಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು (ಗ್ರೇಡ್–1) ತಿಳಿಸಿದ್ದಾರೆ

# ಸಂಯಮ ಪ್ರಶಸ್ತಿಗೆ ಅರ್ಜಿ ಆಹ್ವಾನ ಜನವರಿ 15 ರೊಳಗೆ ಅರ್ಜಿ ಸಲ್ಲಿಸಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ವತಿಯಿಂದ 2023–24ನೇ ಸಾಲಿನ "ಸಂಯಮ ಪ್ರಶಸ್ತಿ"ಗೆ ಅರ್ಜಿ ಆಹ್ವಾನಿಸಿದೆ.

ವ್ಯಸನ ಮುಕ್ತ ಸಮಾಜ ನಿರ್ಮಾಣ ಮಾಡುವಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಸಾಧಕರು ಹಾಗೂ ಸಂಘ ಸಂಸ್ಥೆಗಳು 2024 ಜನವರಿ 15 ರೊಳಗೆ ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ಇ–ಮೇಲ್ kar-temperance@gmail.com ಅಥವಾ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 6ನೇ ಮಹಡಿ, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು– 560 001 ಈ ವಿಳಾಸಕ್ಕೆ ಕಳುಹಿಸಬಹುದು ಪ್ರಕಟಣೆ ತಿಳಿಸಿದೆ.

# ಅಯೋಧ್ಯೆಯ ಅಕ್ಷತೆ ಮನೆ ಮನೆಗೆ

■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಅಯೋಧ್ಯೆಯಲ್ಲಿ ಶ್ರೀ ರಾಮಮಂದಿರ ಉದ್ಘಾಟನೆಯ ಆಹ್ವಾನ ಅಕ್ಷತೆ ಕೊಡುವ ಮೂಲಕ ಹೋಬಳಿಯ ಪ್ರತಿ ಮನೆ ಮನೆಗೂ ತಲುಪಿಸಬೇಕು ಎಂದು ಆರ್‌ಎಸ್‌ಎಸ್‌ನ ಗ್ರಾಮ ವಿಕಾಸ ಪ್ರಾಂತ ಸಂಯೋಜಕ, ಪ್ರಚಾರಕ ರಾಜಶೇಖರ್ ಜೀ ತಿಳಿಸಿದರು.

ಅವರು ಪಟ್ಟಣದ ಶ್ರೀ ಲಕ್ಷ್ಮೀನಾರಾಯಣಸ್ವಾಮಿ, ಶ್ರೀ ಆಂಜನೇಯ ಸ್ವಾಮಿದೇವಸ್ಥಾನದಲ್ಲಿ ಮಂಗಳವಾರ, ಅಯೋಧ್ಯೆಯಿಂದ ಬಂದ ಅಕ್ಷತೆ ಹಾಗು ಆಹ್ವಾನ ಪತ್ರಿಕಾ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇಶದ ಜನರ ಶ್ರದ್ಧೆಯ ಬಿಂದು ಶ್ರೀರಾಮವಾಗಿದ್ದು,ಈ ಕಾರ್ಯಕ್ರಮ ಕೇವಲ ಶ್ರೀರಾಮನಮೂರ್ತಿ ಪ್ರತಿಪ್ರಷ್ಠಾಪನೆ ಅಲ್ಲ,ದೇಶದ ಸ್ವಾಭಿಮಾನ ನಿರ್ಮಾಣ ಕಾರ್ಯಕ್ರಮ ಎಂದರು.

ಆಯೋಧ್ಯೆ ಶ್ರೀರಾಮ ಪ್ರಾಣ ಪ್ರತಿಷ್ಠಾನ ಸಂಬಂಧ ಜ. 22ಕ್ಕೆ ಆಯೋಧ್ಯೆಯಲ್ಲಿ ಪ್ರಭುಶ್ರೀರಾಮ ಮಂದಿರ ಉದ್ಘಾಟನೆಯಾಗುತ್ತಿರುವ ಸಂಭ್ರಮ ದೇಶವ್ಯಾಪ್ತಿಯಾಗಬೇಕು,ಈ ನಿಟ್ಟಿನಲ್ಲಿ ಅಕ್ಷತೆ ಕಾಳುಗಳನ್ನು ಪ್ರತಿ ಊರಿನ ಮನೆಮನೆಗೂ ತಲುಪಬೇಕಾಗಿದೆ ಎಂದರು.



ಇದರಿಂದ 500 ವರ್ಷಗಳ ಹೋರಾಟದ ಸಾಫಲ್ಯತೆ ಅಂದು ಸಿಗುತ್ತದೆ. ದೇಶದ ಜನರ ಶ್ರದ್ಧೆಯ ಬಿಂದು ಶ್ರೀರಾಮವಾಗಿದ್ದು, ಈ ಕಾರ್ಯಕ್ರಮ ಕೇವಲ ಶ್ರೀರಾಮನಮೂರ್ತಿ ಪ್ರತಿಪ್ರಷ್ಠಾಪನೆ ಅಲ್ಲ, ದೇಶದ ಸ್ವಾಭಿಮಾನ ನಿರ್ಮಾಣ ಕಾರ್ಯಕ್ರಮ ಎಂದರು. ಜ. 22ರಂದು ಮಧ್ಯಾಹ್ನ 12.16ಕ್ಕೆ ಆಯಾ ಗ್ರಾಮಗಳಲ್ಲಿನ ದೇವಸ್ಥಾನಗಳಲ್ಲಿ ಪೂಜೆ, ಪುನಸ್ಕಾರ ಕೈಗೊಳ್ಳಬೇಕು.ಅಂದು ಸಂಜೆ ತಮ್ಮ ಮನೆಗಳ ಮುಂದೆ 5 ದೀಪಗಳನ್ನು ಉತ್ತರಾಭಿಮುಖವಾಗಿ ಹಚ್ಚಲು ಕರೆನೀಡಿದರು. ಪ್ರತಿಯೊಬ್ಬರೂ ರಾಮಮಂದಿರ ಉದ್ಘಾಟನೆಯನ್ನು ತಮ್ಮ–ತಮ್ಮ ಊರುಗಳಲ್ಲಿ ದೃಶ್ಯಮಾದ್ಯಮದ ಮೂಲಕ ಕಣ್ತುಂಬಿಕೊಳ್ಳಬೇಕೆಂದರು.

ಈ ಸಂಧರ್ಭದಲ್ಲಿ ಹ.ಬೊ.ಹಳ್ಳಿಬಿಜೆಪಿ ಮಂಡಲಾಧ್ಯಕ್ಷ ವೀರೇಶ್ವರಸ್ವಾಮಿ,ಮರಿಯಮ್ಮನ ಹಳ್ಳಿ ಮಹಾಶಕ್ತಿಕೇಂದ್ರದ ಅಧ್ಯಕ್ಷ ಈ.ಶ್ರವಣ ಕುಮಾರ್,ಕುಪ್ಪಾಗೋವಿಂದರಾಜ(ಗೋಪಿ)ಶೆಟ್ಟಿ, ಎಸ್.ಕೃಷ್ಣನಾಯ್ಕ, ಬದ್ರಿನಾಥಶೆಟ್ಟಿ, ಗುಂಡಾಕೃಷ್ಣ, ಐ.ವೆಂಕಟರಮಣ,ಮಹಾಂತೇಶ್,ಭರತ್,ಪಟ್ಟಣ ಸಂಪರ್ಕ ಗಂಗಾವತಿರಾಜೇಶ್,ಹನುಮನಾಯ್ಕ, ರವಿಕಿರಣ್ ಸೇರಿದಂತೆ ಇತರರಿದ್ದರು.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA